# ಕರ್ನಾಟಕ ಅಗ್ನಿಶಾಮಕದಳದ ಅಧಿನಿಯಮ 1964

## ಕಲಂಗಳ ವ್ಯವಸ್ಥೆ

## ಧ್ಯೇಯೋದ್ಧೇಶಗಳು ಮತ್ತು ಉದ್ದೇಶಗಳು

## ಕಲಂಗಳು.

ಅಧ್ಯಾಯ – I

ಪ್ರಾರಂಭಿಕ

1. ಸಂಕ್ಷಿಪ್ತ ಶೀರ್ಷಿಕೆ ಮತ್ತು ಆರಂಭ

2. ವ್ಯಾಖ್ಯಾನಗಳು

ಅಧ್ಯಾಯ – II

ಅಗ್ನಿಶಾಮಕ ದಳದ ನಿರ್ವಹಣೆ

3. ಅಗ್ನಿಶಾಮಕದಳದ ನಿರ್ವಹಣೆ

4. ಅಗ್ನಿಶಾಮಕದಳದ ನಿರ್ದೇಶಕರ ನೇಮಕಾತಿ

5. ಅಗ್ನಿಶಾಮಕದಳದ ನಿಯಂತ್ರಣ ಮತ್ತು ಮೇಲ್ವಿಚಾರಣೆ / ಉಸ್ತುವಾರಿ

6. ದಳದ ಸದಸ್ಯರ ನೇಮಕಾತಿ

7. ದಳದ ಸದಸ್ಯರಿಗೆ ಪ್ರಮಾಣ ಪತ್ರ ವಿತರಣೆ

8. ಸಹಾಯಕ ಅಗ್ನಿಶಾಮಕದಳ

ಅಧ್ಯಾಯ - III

9. ರಾಜ್ಯ ಸರ್ಕಾರದ, ನಿರ್ದೇಶಕರ ಮತ್ತು ದಳದ ಸದಸ್ಯರ ಅಧಿಕಾರಗಳು.

10. ಅಗ್ನಿ ಅಪಘಾತ ಸಂಭವಿಸಿದಾಗ ದಳದ ಸದಸ್ಯರ ಅಧಿಕಾರಿಗಳು.

11. ನೀರಿನ ಸರಬರಾಜು ವ್ಯವಸ್ಥೆ ಮಾಡುವಲ್ಲಿ ದಳದ ನಿರ್ದೇಶಕರ ಅಧಿಕಾರಗಳು

12. ಸಹಾಯ ಪಡೆಯಲು ಏರ್ಪಾಟು ಮಾಡಲು ಅಧ್ಯಕ್ಷರ ಅಧಿಕಾರಗಳು

13. ಅಪಘಾತ ಸಂಭವಿಸದಂತೆ/ ತಡೆಯುವ ಕ್ರಮಗಳು.

ಅಧ್ಯಾಯ - I ಗಿ

1. ದಳದ ಖರ್ಚು ವೆಚ್ಚಗಳು,

2. ಅಗ್ನಿಶಮನ ತೆರಿಗೆ ಹಾಕುವುದು

3. ಅಗ್ನಿ ಶಮನ ತೆರಿಗೆ ನಿರ್ಧಾರಣೆ, ಸಂಗ್ರಹ, ಇತ್ಯಾದಿ.

4. ಶುಲ್ಕಗಳು.

ಅಧ್ಯಾಯ - ಗಿ

ಅಗ್ನಿಶಾಮಕ ದಳದ ಸ್ಥಳೀಯ ಪ್ರಾಧಿಕಾರದ ದಳದ ಆಸ್ತಿ ಮತ್ತು ಹೊಣೆಗಳ ಜವಾಬ್ದಾರಿಗಳ ವರ್ಗಾವಣೆ.

5. ದಳದ ಸ್ಥಳೀಯ ಪ್ರಾಧಿಕಾರದ ದಳದ ಆಸ್ತಿ ಮತ್ತು ಹೊಣೆಗಳ ಜವಾಬ್ದಾರಿಗಳ ವರ್ಗಾವಣೆ.

6. ಭವಿಷ್ಯನಿಧಿ/ ಪ್ರಾವಿಡೆಂಟ್, ವಯೋನಿವೃತ್ತಿನಿಧಿ ಮತ್ತಿತರ ಅದೇ ರೀತಿಯ ನಿಧಿಗಳು.

7. ದಳದ ಸ್ಥಳೀಯ ಪ್ರಾಧಿಕಾರದ ದಳದ ಆಸ್ತಿ ಮತ್ತು ಹೊಣೆಗಳ ಜವಾಬ್ದಾರಿಗಳ ವರ್ಗಾವಣೆಯ ಸಾಮಾನ್ಯ ಪರಿಣಾಮ.

8. ಸ್ಥಳೀಯ ಪ್ರಾಧಿಕಾರದ ನೌಕರರ ಸೇವೆಯ ವರ್ಗಾವಣೆ.

9. ಆಸ್ತಿ ಮತ್ತು ಅದಕ್ಕೆ ದಸ್ತಾವೇಜು/ ದಾಖಲಾತಿಗಳ ಸುಪರ್ದಿಯನ್ನು ಹಸ್ತಾಂತರಿಸಿ /ಕೊಡುಮಾಡುವ ಕರ್ತವ್ಯ.

ಅಧ್ಯಾಯ - ಗಿI

ಜುಲ್ಮಾನೆಗಳು/ ದಂಡ.

10. ಕರ್ತವ್ಯದ ಉಲ್ಲಂಘನೆಗೆ ವಿಧಿಸುವ ದಂಡ/ಜುಲ್ಮಾನೆ.

23. ಒ ರಾಜದ್ರೋಹ/ಅಪ್ರೀತಿಯನ್ನುಂಟು ಮಾಡಿದುದಕೆ ದಂಡ/ಜುಲ್ಮಾನೆ.

24. ಮಾಹಿತಿ ನೀಡುವಲ್ಲಿ ವೈಫಲ್ಯ.

25. ಮುಂಜಾಗರೂಕತೆಯ ಕ್ರಮ ತೆಗೆದುಕೊಳ್ಳಲು ವಿಫಲತೆ.

26. ಅಗ್ನಿಶಾಮಕದಳದ ಕಾರ್ಯವನ್ನು/ಆಚರಣೆಯನ್ನು ಉದ್ದೇಶಪೂರ್ವಕವಾಗಿ ಅಡ್ಡಿ ಪಡಿಸುವುದು.

ಅಧ್ಯಾಯ - ಗಿII

ಸಾಮಾನ್ಯ ಮತ್ತು ಸಂಕೀರ್ಣ.

28. ಇತರ ನೌಕರಿಯ ನಿಷೇಧ

29. ಬೇರೆ ಪ್ರದೇಶಕ್ಕೆ ವರ್ಗಾವಣೆ

30. ಇತರ ಕರ್ತವ್ಯಗಳ ಮೇಲೆ ನೇಮಕಾತಿ/ನಿಯುಕ್ತಿ

31. ಪರಿಹಾರ ಧನ ನೀಡುವಲ್ಲಿ ಆಸ್ತಿಯ ಮಾಲೀಕರ ಹೊಣೆಗಾರಿಕೆ

32. ಮಾಹಿತಿ ಪಡೆಯುವ ಅಧಿಕಾರ

33. ಪ್ರವೇಶದ ಅಧಿಕಾರ

34. ನೀರಿನ ಉಪಯೋಗ

35. ನೀರು ಸರಬರಾಜು ವ್ಯತ್ಯಯವಾದಲ್ಲಿ ಯಾವುದೇ ಪರಿಹಾರವಿಲ್ಲ.

36. ಪೊಲೀಸ್ ಅಧಿಕಾರಿಗಳು ಸಹಾಯ ಮಾಡುವಿಕೆ.

37. ಅಗ್ನಿ/ಬೆಂಕಿ ಹತ್ತಿಕೊಂಡ ಬಗೆಗೆ ಮಾಹಿತಿ ನೀಡುವಿಕೆ.

38. ನಷ್ಟ ಭರ್ತಿ ಮಾಡುವಿಕೆ.

39. ನಿಯಮಗಳನ್ನು ರಚಿಸುವ ಅಧಿಕಾರ

40. ರದ್ದಿಯಾತಿ ಮತ್ತು ಉಳಿಸುವಿಕೆ.

ಧ್ಯೇಯೋದ್ಧೇಶಗಳು ಮತ್ತು ಉದ್ದೇಶಗಳು

1964 ರ 42 ನೇ ಅಧಿನಿಯಮ - ಪ್ರಸ್ತುತ ಏಕೀಕರಣಗೊಂಡ ಮೈಸೂರು ರಾಜ್ಯದ ಐದು ಪ್ರಾಂತಗಳಲ್ಲಿ ವಿಭಿನ್ನವಾದ ಅರಣ್ಯಕಾಯಿದೆಗಳು ಜಾರಿಯಲ್ಲಿದೆ. ವಿವಿಧ ಭಾಗಗಳಲ್ಲಿ ವಿಭಿನ್ನ ಕಾಯಿದೆಗಳನ್ನು ಜಾರಿಗೊಳಿಸುವುದು ಆಡಳಿತಾತ್ಮಕವಾಗಿ ಕಷ್ಟಕರವಾದುದರಿಂದ, ರಾಜ್ಯದಾದ್ಯಂತ ಏಕ ಪ್ರಕಾರವಾದ/ ಒಂದೇ ರೀತಿಯ ಅರಣ್ಯ ಕಾಯಿದೆಗಳನ್ನು ಜಾರಿಗೆ ತರಲು ಪ್ರಸ್ತುತ ಮಸೂದೆಯನ್ನು ತಯಾರಿಸಲಾಗಿದೆ.

ಮಸೂದೆಯಲ್ಲಿನ ಅತಿಮುಖ್ಯವಾದ ಉಪಬಂಧಗಳು/ವಿಷಯಗಳು, ಕೆಳಗಿನಂತೆ ಇದೆ.

ಈ ಮಸೂದೆಯ, ಅಧ್ಯಾಯ  ಅಧ್ಯಾಯ - ಗಿ ರಲ್ಲಿ ಸರ್ಕಾರದ ಆಸ್ತಿಯಲ್ಲದ ಅರಣ್ಯ ಮತ್ತು ಜಮೀನುಗಳ ನಿಯಂತ್ರಣಕ್ಕೆ ಉಪಬಂಧ/ವ್ಯವಸ್ಥೆಯನ್ನು ಪ್ರಸ್ತುತ ಬಾಂಬೆ/ಮುಂಬಯಿ ಮತ್ತು ಮದ್ರಾಸ್ ಪ್ರದೇಶಗಳಲ್ಲಿ ಜಾರಿಯಲ್ಲಿರುವಂತೆ ಕಲ್ಪಿಸಲಾಗಿದೆ. ಇದರ ಧ್ಯೇಯೋದ್ಧೇಶವೆಂದರೆ, ಖಾಸಗಿ ಮಾಲೀಕರು ಮನಬಂದಂತೆ/ ಯದ್ವಾತದ್ವಾ ಮರಗಳ ಬೆಳವಣಿಗೆಯನ್ನು ಅರಣ್ಯದ ಬೆಲೆ/ಉತ್ಪಾದನೆಗಳ ಉಪಯೋಗಿಸುವುದನ್ನು ತಡೆಗಟ್ಟುವುದು, ಉಪಯೋಗದ ಮುಖ್ಯ ಉದ್ದೇಶವು ತಕ್ಷಣದಲ್ಲಿ ಭಾರಿ ಲಾಭಗಳಿಸುವಿಕೆಯನ್ನು ನಿಲ್ಲಿಸಿ, ಸಮುದಾಯಕ್ಕೆ ಭವಿಷ್ಯದುದ್ದಕ್ಕೂ ಏಕ ಪ್ರಕಾರವಾದ ಉತ್ಪನಗಳನ್ನು ಕೊಡುವಂತೆ ಮಾಡುವುದಾಗಿದೆ. ಕೆಲವು ಸಂಧರ್ಭಗಳಲ್ಲಿ ಅರಣ್ಯದ ಆಡಳಿತ/ವ್ಯವಸ್ಥೆಯನ್ನು/ ಸರ್ಕಾರ ತೆಗೆದುಕೊಳ್ಳುವುದಕ್ಕೆ ಅಧಿಕಾರವಿದೆ.

ಅಧ್ಯಾಯ ।ಗಿ ರಲ್ಲಿ ಎಲ್ಲೇ ಬೆಳೆದಿರಬಹುದಾದ ಯಾವುದೇ ಶ್ರೀಗಂಧದ ಮರವು ಸರ್ಕಾರದ ಮೀಸಲಾಗಿಟ್ಟ ಆಸ್ತಿಯೆಂದು, ಈ ಅಧಿನಿಯಮದ ಆರಂಭದ ದಿನಾಂಕದಿಂದ, ಅವುಗಳ ಉಪಯೋಗದ ಅಧಿಕಾರವು ಸರ್ಕಾರದಲ್ಲಿ ವಿಹಿತವಾಗಿದೆ. ಅದರ ಮೇಲಿನ ಹಕ್ಕುಗಳ ಪರಭಾರೆಯನ್ನು ಕೇವಲ ಅರಣ್ಯ

ಇಲಾಖೆಯು, ಮಾಲಿಕರ ಪರವಾಗಿ ಮಾತ್ರ ಮಾಡಬಹುದಾಗಿದೆ. ಈ ಉಪಬಂಧಗಳನ್ನು ಶ್ರೀಗಂಧದ ಕಳ್ಳಸಾಗಾಣಿಕೆಯನ್ನು ನಿಷೇಧಿಸಲು/ನಿಲ್ಲಿಸಲು ಮಾಡಲಾಗಿದೆ. ಒಂದು ಮುಖ್ಯ ವಾಣಿಜ್ಯ ಉತ್ಪಾದನೆಯಾದ ಖರ್ಚು ಬಗೆಗಿನ ವಿಶೇಷ ಉಪಬಂಧಗಳನ್ನು ಅಧ್ಯಾಯ ಫಿ। ರಲ್ಲಿ ಮಾಡಲಾಗಿದೆ.

ಕರ್ನಾಟಕ ಗೆಜೆಟ್/ರಾಜ್ಯಪತ್ರದ ಭಾಗ-। ಗಿ 2಼೦ ರಲ್ಲಿ 384-

ದಿನಾಂಕ 28 ನೇ 1962 ರಲ್ಲಿ ಪ್ರಕಟವಾಗಿದೆ.।।

1994 ರ 40 ನೇ ಅಧಿನಿಯಮಕ್ಕೆ ತಿದ್ದುಪಡಿ.

ಅಗ್ನಿಶಾಮಕದಳವು ಒಂದು ತುರ್ತು ಸೇವೆ ಮತ್ತು ಅವಶ್ಯಕ ಸೇವೆಯಾಗಿದೆ. ಆದುದರಿಂದ ಅಗ್ನಿಶಾಮಕದಳದ ಸದಸ್ಯರ ಸೇವೆಯು ಜನಗಳಿಗೆ ಅವಿಚ್ಚಿನ್ನವಾಗಿ, ಯಾವುದೇ ಅಡೆತಡೆಗಳಿಲ್ಲದೇ ದೊರೆಯುವಂತಿರಬೇಕು.

ಕರ್ನಾಟಕ ಪೊಲೀಸ್ ಕಾಯಿದೆಯ-1964 ರ ಕಲಂ 123 ರಡಿಯಲ್ಲಿ ಪೊಲೀಸ್ ಬಲದ ಸದಸ್ಯನೊಬ್ಬನು ಉದ್ದೇಶ ಪೂರ್ವಕವಾಗಿ ರಾಜದ್ರೋಹ/ಅಪ್ರೀತಿಯನ್ನುಂಟು ಮಾಡಿದುದಕೆ ಅಥವಾ ರಾಜದ್ರೋಹ/ಅಪ್ರೀತಿಯನ್ನುಂಟು ಮಾಡಬಹುದೆಂದು ತಿಳಿವಳಿಕೆಯಿದ್ದೂ ಅಂತಹ ಕೃತ್ಯವನ್ನೆಸಗಿದ್ದಲ್ಲಿ, ಪೊಲೀಸ್ ಬಲದಲ್ಲಿ ಅಂತಹ ಕೃತ್ಯವನ್ನೆಸಗಿದಲ್ಲಿ, ಪೊಲೀಸ್ ಬಲದಲ್ಲಿ ಅಂತಹ ಅಪ್ರೀತಿಯನ್ನು ಉಂಟು ಮಾಡಿದ್ದಲ್ಲಿ ದಂಡ/ಜುಲ್ಮಾನೆಯನ್ನು ವಿಧಿಸುವ ಉಪಬಂಧವಿದೆ. ಆ ತರಹದ ಉಪಬಂಧವು ಕರ್ನಾಟಕ ಅಗ್ನಿಶಾಮಕದಳದ ಅಧಿನಿಯಮ 1964 ರಲ್ಲಿ ಕಂಡುಬರುವುದಿಲ್ಲ. ಆದುದರಿಂದ ಅದೇ ರೀತಿಯ ಉಪಬಂಧವನ್ನು ಕರ್ನಾಟಕ ಅಗ್ನಿಶಾಮಕದಳದಲ್ಲಿ ಕೂಡಾ ಸೇರಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಆದುದರಿಂದ ಈ ಮಸೂದೆಯನ್ನು ತರಲಾಗಿದೆ.

( ವಿ.ಸೂ.ಮಸೂದೆ ಸಂಖ್ಯೆ 21/1992 ರಿಂದ ಪಡೆದುಕೊಳ್ಳಲಾಗಿದೆ)

1(ಕರ್ನಾಟಕ) 1 ಅಧಿನಿಯಮ ಸಂಖ್ಯೆ.42/1964

( ಮೊಟ್ಟ ಮೊದಲಿಗೆ ಕರ್ನಾಟಕ ಗೆಜೆಟ್) 1 ರಲ್ಲಿ 1964 ರ ನವೆಂಬರ್ 20, ಇಪ್ಪತ್ತರಂದು ಪ್ರಕಟಿಸಲ್ಪಟ್ಟಿತು.)

(ಕರ್ನಾಟಕ) 1 ಅಗ್ನಿಶಾಮಕದಳದ ಅಧಿನಿಯಮ, 1964

(1964 ರ ನವೆಂಬರ್ ಐದನೇ ತಾರೀಖಿನಂದು ರಾಜ್ಯಪಾಲರ ಹಸ್ತಾಕ್ಷರವನ್ನು ಪಡೆಯಿತು)
(ಕರ್ನಾಟಕ ಅಧಿನಿಯಮ 40/1994 ರಡಿಯಲ್ಲಿ ತಿದ್ದುಪಡಿಮಾಡಲಾಗಿದೆ)

ಕರ್ನಾಟಕ ರಾಜ್ಯದಲ್ಲಿ ಅಗ್ನಿಶಾಮಕದಳದ ನಿರ್ವಹಣೆಗಾಗಿ ಒಂದು ಅಧಿನಿಯಮ/ಕಾಯಿದೆ. ಕರ್ನಾಟಕ ರಾಜ್ಯದಲ್ಲಿ ಅಗ್ನಿಶಾಮಕದಳವನ್ನು ವ್ಯವಸ್ಥೆ ನಿರ್ವಹಣೆ ಮಾಡುವುದು ತ್ವರಿತವಾದ ಅವಶ್ಯಕತೆಯಾಗಿದೆ.

ಭಾರತದ ಗಣರಾಜ್ಯದ ಹದಿನೈದನೇ ವರ್ಷದಲ್ಲಿ ( ಕರ್ನಾಟಕ ರಾಜ್ಯ ) ದಲ್ಲಿ ಅಧಿನಿಯಮವನ್ನು ಸ್ವೀಕರಿಸಲಾಗುವುದು, ಜಾರಿಗೊಳಿಸಲಾಗುವುದು.

1. ಕರ್ನಾಟಕ ಕಾನೂನು ಅಧಿನಿಯಮಗಳ, ಹೊಂದಿಸಿಕೊಳ್ಳುವಿಕೆ ಆಜ್ಞೆ 1973 – 1-11-1973 ರಿಂದ ಜಾರಿಯಾಗುವಂತೆ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ.

ಅಧ್ಯಾಯ - I

ಪ್ರಾರಂಭಿಕ

1. ಸಂಕ್ಷಿಪ್ತ ಶೀರ್ಷಿಕೆ ಮತ್ತು ಆರಂಭ

2.

(1) ಈ ಅಧಿನಿಯಮವನ್ನು 1(ಕರ್ನಾಟಕ) ಅಗ್ನಿಶಾಮಕದಳದ ಅಧಿನಿಯಮ 1964 ಎಂದು ಕರೆಯಲ್ಪಡಲಿ.

1. ಕರ್ನಾಟಕ ಕಾನೂನು ಅಧಿನಿಯಮಗಳ, ಹೊಂದಿಸಿಕೊಳ್ಳುವಿಕೆ ಆಜ್ಞೆ 1973-1-11-1973 ರಿಂದ ಜಾರಿಯಾಗುವಂತೆ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ.

2. ಇದು ಕರ್ನಾಟಕ ರಾಜ್ಯದಾದ್ಯಂತ ಅಧಿಕಾರ ವ್ಯಾಪ್ತಿ ಹೊಂದಿದೆ.

1.ಕರ್ನಾಟಕ ಕಾನೂನು ಅಧಿನಿಯಮಗಳ, ಹೊಂದಿಸಿಕೊಳ್ಳುವಿಕೆ ಆಜ್ಞೆ 1973-1-11-1973 ರಿಂದ ಜಾರಿಯಾಗುವಂತೆ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ.

3. ಇದು ಯಾವುದೇ ಪ್ರಾಂತ್ಯ/ಪ್ರದೇಶದಲ್ಲಿ ರಾಜ್ಯ ಸರ್ಕಾರವು ಅಧಿಕೃತ ಗೆಜೆಟ್

ನಲ್ಲಿ ಅಧಿಸೂಚನೆಯ ಮೂಲಕ (ದಿನಾಂಕ)1-ನೇಮಕ ಮಾಡಿದಂತೆ, ವಿವಿಧ ಪ್ರದೇಶಗಳಿಗೆ ವಿಭಿನ್ನ/ಬೇರೆ ಬೇರೆ ತಾರೀಖುಗಳಿರಬಹುದಾಗಿದೆ.

1.ಈ ಅಧಿನಿಯಮವು ವಿವಿಧ ದಿನಾಂಕಗಳಂದು ವಿಭಿನ್ನ ಪ್ರದೇಶಗಳಲ್ಲಿ ಪ್ರತ್ಯೇಕ ಅಧಿಸೂಚನೆಯ ಮೂಲಕ ಜಾರಿಗೆ ಬಂದಿದೆ. ಲಭ್ಯವಿರುವ ಅಧಿಸೂಚನೆಗಳ ಸಾರಾಂಶವನ್ನು ಈ ಅಧಿನಿಯಮ ಅಂತ್ಯಭಾಗದಲ್ಲಿ ನೀಡಲಾಗಿದೆ.

2.ವ್ಯಾಖ್ಯಾನಗಳು : ಈ ಅಧಿನಿಯಮದಲ್ಲಿ, ಸಂದರ್ಭಗಳು ಬೇರೆ ರೀತಿಯಲ್ಲಿ ಅವಶ್ಯಕವಾಗಿರಬೇಕಾದುದರ ಹೊರತಾಗಿ,

(ಚಿ) ‘ನಿರ್ದೇಶಕರು’ ಎಂದರೆ, ಕಲಂ 4 ರಡಿಯಲ್ಲಿ ನೇಮಕಗೊಂಡ ನಿರ್ದೇಶಕರು, ಅಗ್ನಿಶಾಮಕದಳ,

(b) ‘ ಅಗ್ನಿಶಾಮಕ ಆಸ್ತಿ ಎಂದರೆ’ ಅದರಲ್ಲಿ ಕೆಳಗಿನವು ಒಳಗೊಂಡಿರುತ್ತೆ.

(i) ಅಗ್ನಿಶಾಮಕದಳದ ಠಾಣೆಯಾಗಿ ಉಪಯೋಗಿಸಲ್ಪಡುವ ನೆಲ ಮತ್ತು ಕಟ್ಟಡಗಳು.

(ii) ಅಗ್ನಿಶಾಮಕಗಳು/ಫೈರ್ ಇಂಜಿನಗಳು, ಸಲಕರಣೆಗಳು, ಉಪಕರಣಗಳು, ಅಗ್ನಿ ನಿಯಂತ್ರಣ ಶಮನಕ್ಕೆ ಉಪಯೋಗಿಸಿದ/ಉಪಯೋಗಿಸುವ ಯಾವುದೇ ವಸ್ತುಗಳು/ಸಾಮಾನುಗಳು.

(iii) ಅಗ್ನಿಶಮನಕ್ಕೆ ಉಪಯೋಗಿಸುವ ಮೋಟಾರ್ ವಾಹನಗಳು, ಮತ್ತಿತರ ಸಾರಿಗೆ ಸೌಲಭ್ಯಗಳೂ ಸೇರಿವೆ. ಮತ್ತು

(iv) ಅಧಿಕಾರ/ಹುದ್ದೆಯ ಸೂಚಕವಾದ ಬ್ಯಾಡ್ಜ್ ಮತ್ತು ಸಮವಸ್ತ್ರಗಳು.

(ಅ) ಅಗ್ನಿಶಾಮಕಠಾಣೆ/ಫೈರ್ ಸ್ಟೇಷನ್, ಎಂದರೆ ಯಾವುದೇ ಸ್ಥಳ, ಠಾಣೆ ರಾಜ್ಯ ಸರ್ಕಾರದಿಂದ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಗ್ನಿಶಾಮಕಠಾಣೆ/ಫೈರ್ ಸ್ಟೇಷನ್ ಎಂದು ಘೋಷಿಸಲ್ಪಟ್ಟಿರುವುದು.

(ಜ) ‘ದಳ’ ಎಂದರೆ, ( ಕರ್ನಾಟಕ ಅಗ್ನಿಶಾಮಕದಳ) 1-ಈ ಅಧಿನಿಯಮದಡಿಯಲ್ಲಿ ಸೂಚಿಸಿದಂತೆ

(e) ಅಗ್ನಿಶಾಮಕಠಾಣೆ/ಫೈರ್ ಸ್ಟೇಷನ್ ನ ಅಧಿಕಾರ ಹೊಂದಿರುವ – ಇನ್

ಜಾರ್ಜ್ ಎಂದರೆ, ಅಗ್ನಿಶಾಮಕಠಾಣೆಯ ನಿಯಮಿತ ಠಾಣಾಧಿಕಾರಿಯ ಸ್ವಸ್ಥಳ/ಕಾರ್ಯದ ಮುಖ್ಯ ಸ್ಥಳದಿಂದ ದೂರವಿದ್ದಲ್ಲಿ ಅಥವಾ ಅನಾರೋಗ್ಯದ ನಿಮಿತ್ತ ತನ್ನ ಕರ್ತವ್ಯ ಕಾರ್ಯನಿರ್ವಹಿಸಲಾಗದಿದ್ದಲ್ಲಿ, ಅಥವಾ ಬೇರ್ಯಾವುದೇ ಕಾರಣದಿಂದ ಕಾರ್ಯ ನಿರ್ವಹಿಸಲಾಗದಿದ್ದಲ್ಲಿ, ಠಾಣೆಯಲ್ಲಿ ಹಾಜರಿರುವ ಅವರ ನಂತರದ ಸ್ಥಾನ/ಹುದ್ದೆಯಲ್ಲಿರುವ ಅಗ್ನಿಶಾಮಕದಳದ ಅಧಿಕಾರಿ.

(ಜಿ) ‘ನಿಗಧಿತ’ ಎಂದರೆ, ಈ ಅಧಿನಿಯಮದಡಿಯಲ್ಲಿ ರಚಿಸಿದ ನಿಯಮಗಳ ಪ್ರಕಾರ ನಿಗದಿಪಡಿಸುವುದಾಗಿದೆ.

ಅಧ್ಯಾಯ - II

ಅಗ್ನಿಶಾಮಕ ದಳದ ನಿರ್ವಹಣೆ

1.ಅಗ್ನಿಶಾಮಕ ದಳದ ನಿರ್ವಹಣೆ

ಈ ಅಧಿನಿಯಮವು ಜಾರಿಯಲ್ಲಿರುವ ಸ್ಥಳೀಯ ಪ್ರದೇಶಗಳಲ್ಲಿ, ಸೇವೆಗಾಗಿ ಅಗ್ನಿಶಾಮಕದಳವೊಂದನ್ನು ಸರ್ಕಾರವು ನಿರ್ವಹಣೆ ಮಾಡುತ್ತದೆ ಅದನ್ನು ( ಕರ್ನಾಟಕ ಅಗ್ನಿ ಶಾಮಕ ದಳ ) ಎಂದು ಕರೆಯಲಾಗುತ್ತದೆ.
1.ಕರ್ನಾಟಕ ಕಾನೂನು ಅಧಿನಿಯಮಗಳ, ಹೊಂದಿಸಿಕೊಳ್ಳುವಿಕೆ ಆಜ್ಞೆ 1973-1-11-1973 ರಿಂದ ಜಾರಿಯಾಗುವಂತೆ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ.

2.ಅಗ್ನಿಶಾಮಕದಳದ ನಿರ್ದೇಶಕರ ನೇಮಕಾತಿ : ರಾಜ್ಯ ಸರ್ಕಾರವು ಒಬ್ಬ ವ್ಯಕ್ತಿಯನ್ನು ಅಗ್ನಿ ಶಾಮಕದಳದ ನಿರ್ದೇಶಕರೆಂದು ನೇಮಕಾತಿ ಮಾಡುತ್ತದೆ.

3.ಅಗ್ನಿಶಾಮಕದಳದ ಮೇಲುಸ್ತುವಾರಿ ಮತ್ತು ನಿಯಂತ್ರಣ : (1) ರಾಜ್ಯ ಸರ್ಕಾರದ ನಿಯಂತ್ರಣಕ್ಕೊಳಪಟ್ಟು, ಅಗ್ನಿಶಾಮಕದಳದ ಮೇಲುಸ್ತುವಾರಿ ಮತ್ತು ನಿಯಂತ್ರಣ ಇವುಗಳ ಅಧಿಕಾರವು ನಿರ್ದೇಶಕರಲ್ಲಿ

ವಿಹಿತವಾಗಿರುತ್ತದೆ. ಮತ್ತು ತಮ್ಮ ಅಧಿಕಾರವನ್ನು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಮತ್ತು ಇದರಡಿಯಲ್ಲಿ ರಚಿತವಾದ ಯಾವುದೇ ನಿಯಮಗಳನುಸಾರವಾಗಿ ಕಾರ್ಯರೂಪಕ್ಕೆ ತರುತ್ತಾರೆ.

2. ರಾಜ್ಯ ಸರ್ಕಾರವು ನಿರ್ದೇಶಕರಿಗೆ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಸಹಾಯ/ಸಹಕಾರಕ್ಕಾಗಿ ತನಗೆ ಉಚಿತವೆನಿಸಿದ ರೀತಿಯಲ್ಲಿ ಅಧಿಕಾರಿಗಳನ್ನು ನೇಮಿಸುತ್ತದೆ.

1.ದಳದ ಸದಸ್ಯರನ್ನು ನೇಮಕಾತಿ ಮಾಡುವ ಬಗೆ : ರಾಜ್ಯ ಸರ್ಕಾರವು ಅಧಿಕೃತವಾಗಿ ನೀಡಿದ ಅಧಿಕಾರಕನ್ನುಸಾರವಾಗಿ, ನಿರ್ದೇಶಕರಾಗಲೀ, ಅಥವಾ ಅಧಿಕಾರ ನೀಡಲ್ಪಟ್ಟ ಇತರ ಅಧಿಕಾರಿಗಳು ದಳದ ಸದಸ್ಯರುಗಳನ್ನು ಈ ಅಧಿನಿಯಮದಡಿಯಲ್ಲಿ ರಚಿತವಾದ ನಿಯಮಗಳ ಪ್ರಕಾರ, ನೇಮಕ ಮಾಡುತ್ತಾರೆ.

2.ದಳದ ಸದಸ್ಯರಿಗೆ ಪ್ರಮಾಣ ಪತ್ರ ನೀಡುವಿಕೆ. (1) ದಳಕ್ಕೆ ನೇಮಕ ಹೊಂದಿದ ಪ್ರತಿಯೊಬ್ಬ ವ್ಯಕ್ತಿಯೂ ಕೂಡ ನಿಗದಿತ ನಮೂನೆಯಲ್ಲಿ ನಿರ್ದೇಶಕರ ಅಥವಾ ರಾಜ್ಯ ಸರ್ಕಾರದಿಂದ ಅಧಿಕೃತ ಗೊಳಿಸಿದ ಅಧಿಕಾರಿಗಳ ಮೊಹರುವುಳ್ಳ  ಪ್ರಮಾಣಪತ್ರವನ್ನು  ಮತ್ತು ತದನಂತರ ಅಂತಹ ವ್ಯಕ್ತಿ ಅಧಿನಿಯಮದ ಪ್ರಕಾರ ದಳದ ಸದಸ್ಯರಿಗೆ ಸಲ್ಲುವ ಅಧಿಕಾರ, ಕಾರ್ಯ ಮತ್ತು ಹಕ್ಕು ಭಾದ್ಯತೆಗಳು ಲಭ್ಯವಾಗುತ್ತದೆ.

2)  ಉಪಖಂಡ (1) ರಲ್ಲಿ ಪ್ರಸ್ತಾಪಿಸಲ್ಪಟ್ಟ ಪ್ರಮಾಣ ಪತ್ರವು, ಅದರಲ್ಲಿ ಹೆಸರಿಸಿದ ವ್ಯಕ್ತಿಯು ಯಾವುದೇ ಕಾರಣಕ್ಕಾಗಿ ದಳ ಸದಸ್ಯತ್ವವನ್ನು ಕೊನೆಗಾಣಿಸಿದಲ್ಲಿ, ಆ ರೀತಿ ಸದಸ್ಯತ್ವ ಕೊನೆಗೊಂಡಲ್ಲಿ ಅಂತಹ ಸದಸ್ಯರು ತಕ್ಷಣದಲ್ಲಿಯೇ ತನ್ನ ಪ್ರಮಾಣ ಪತ್ರವನ್ನು ಅದನ್ನು ತೆಗೆದುಕೊಳ್ಳುವ ಅಧಿಕಾರ ಹೊಂದಿರುವ ಅಧಿಕಾರಿಗೆ ಒಪ್ಪಿಸತಕ್ಕದ್ದು.

3) ಯಾವುದೇ ಕಾರಣಕ್ಕಾಗಿ ದಳದ ಸದಸ್ಯರು ಅಮಾನತ್ ಹೊಂದಿದ್ದಲ್ಲಿ ಅಂತಹ ಸದಸ್ಯರಲ್ಲಿ ವಿಹಿತಗೊಂಡಿದ್ದ ಅಧಿಕಾರ, ಕಾರ್ಯಗಳು ಮತ್ತು ವಿಶೇಷ ಸವಲತ್ತುಗಳು ಸ್ಥಗಿತಗೊಳ್ಳುತ್ತವೆ. ಆದಾಗ್ಯೂ ಅಂತಹ ಸದಸ್ಯರು ಅಮಾನತ್ ನಲ್ಲಿಲ್ಲದೇ ಮಾಮೂಲಿ ಸದಸ್ಯರಿಗೆ ಅನ್ವಯವಾಗುವ ಎಲ್ಲಾ ಶಿಸ್ತು ಮತ್ತು ದಂಡ, ಜುಲ್ಮಾನೆಗಳಿಗೆ ಬದ್ಧರಾಗಿರುತ್ತಾರೆ.

8) ಸಹಾಯಕ/ಆಕ್ಸಿಲಿಯರಿ ಅಗ್ನಿಶಾಮಕದಳ : (1) ರಾಜ್ಯ ಸರ್ಕಾರಕ್ಕೆ ದಳದ ಬಲವರ್ಧನೆ ಮಾಡುವ ಅಗತ್ಯವೆನೆಸಿದಾಗ, ಅದು ಸಹಾಯಕ/ಆಕ್ಸಿಲಿಯರಿ ದಳವೊಂದನ್ನು ಆ ಪ್ರದೇಶದಲ್ಲಿನ ಸ್ವಯಂ ಸೇವಕರನ್ನು ತನಗೆ ಔಚಿತ್ಯವೆನಿಸುವ ರೀತಿಯಲ್ಲಿನ ಸೇವಾ ಷರತ್ತು ಮತ್ತು ನಿಬಂಧನೆಗೊಳಪಟ್ಟು ಭರ್ತಿ/ನೋಂದಣಿ ಮಾಡಿಕೊಂಡು, ಆರಂಭಿಸಬಹುದಾಗಿದೆ.

2) ಆ ರೀತಿ ಉಪ ಕಲಂ (1) ಯು ಸಹಾಯಕ ದಳಕ್ಕೆ ಭರ್ತಿ/ನೋಂದಣಿ ಹೊಂದಿದ ಪ್ರತಿಯೊಬ್ಬ ವ್ಯಕ್ತಿಯೂ ಸಹ (1),

ಅ) ರಾಜ್ಯ ಸರ್ಕಾರವು ಅನುಮೋದಿಸಿದ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ಪಡೆದುಕೊಳ್ಳುತ್ತಾರೆ.

ಆ) ಆ ಪ್ರಮಾಣ ಪತ್ರದಲ್ಲ ವಿಶೇಷವಾಗಿ ನಮೂದಿಸಲ್ಪಟ್ಟ ಅಧಿಕಾರ, ವಿಶೇಷ ಸವಲತ್ತುಗಳು ಮತ್ತು ಕರ್ತವ್ಯಗಳು ಎಲ್ಲಾ ಅಥವಾ ಕೆಲವು ಅಧಿಕಾರವನ್ನು ನಿಹಿತಗೊಳಿಸಿರುತ್ತದೆ.

ಇ) ಇವುಗಳೆಲ್ಲವೂ ನಿರ್ದೇಶಕರ ಆಜ್ಞೆಗೆ ಒಳಪಟ್ಟಿರುತ್ತದೆ.

ಅಧ್ಯಾಯ - III

9) ರಾಜ್ಯ ಸರ್ಕಾರದ, ನಿರ್ದೇಶಕರ ಮತ್ತು ದಳದ ಸದಸ್ಯರ ಅಧಿಕಾರಗಳು :

ರಾಜ್ಯ ಸರ್ಕಾರವು ತನಗೆ ಸರಿ/ವಿಹಿತವೆನಿಸಿದ ಯಾವುದೇ ಷರತ್ತು, ನಿಬಂಧನೆಗಳನ್ನು ಅಧಿಕೃತ ಗೆಜೆಟ್/ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸುವ ಮೂಲಕ ಮಾಡಬಹುದಾಗಿದೆ.

ಅ) ತನಗೆ ಉಚಿತ/ಸರಿಯೆನಿಸಿದ ರೀತಿಯಲ್ಲಿ ಸಾಕಷ್ಟು ನೀರು ಸರಬರಾಜು ಮತ್ತು ಉಪಕರಣಗಳನ್ನು ಅಗ್ನಿಶಾಮಕ ದಳಕ್ಕೆ ಒದಗಿಸುವುದು.

ಆ) ತನಗೆ ಉಚಿತ/ಸರಿಯೆನಿಸಿದ ರೀತಿಯಲ್ಲಿ ಸಾಕಷ್ಟು ನೀರು ಸರಬರಾಜು ಮತ್ತೆ ಅದು ಉಪಯೋಗಕ್ಕೆ ಬರುವಂತಾಗುವುದು.

ಇ) ದಳದ ಸದಸ್ಯರ ವಸತಿಗಾಗಿ – ಅಗ್ನಿಶಾಮಕ ಉಪಕರಣಗಳ ಠಾಣೆಗಳ ಕಟ್ಟುವಿಕೆ, ಠಾಣೆಗಳನ್ನೊದಗಿಸುವಿಕೆ, ಅಥವಾ ಬಾಡಿಗೆಗೆ ಪಡೆದು ಒದಗಿಸುವುದು.

ಈ) ಅಗ್ನಿ ದುರಂತದ ಬಗೆಗೆ ಸೂಚನೆ/ಸುಳಿವು ನೀಡಿದವರಿಗೆ ಮತ್ತು ಅಗ್ನಿ ದುರಂತ ಸಂಭವಿಸಿದಾಗ ಅಗ್ನಿಶಾಮಕದಳಕ್ಕೆ ಪರಿಣಾಮಕಾರಿಯಾದ ಸೇವೆಯನ್ನು ನೀಡಿರುವವರಿಗೆ ಪ್ರಶಸ್ತಿಗಳನ್ನು ನೀಡುವುದು.

ಉ) ದಳದ ಸದಸ್ಯರ ತರಬೇತಿ, ಶಿಸ್ತು ಮತ್ತು ಉತ್ತಮ ನಡವಳಿಕೆ ಇವುಗಳಿಗಾಗಿ,

ಋ) ಅಗ್ನಿದುರಂತದ ಎಚ್ಚರಿಕೆ ಘಂಟೆಗೆ ಸ್ಪಂದಿಸಿ ಈ ಅಧಿನಿಯಮದ ಪ್ರಕಾರ ಕಾರ್ಯವ್ಯಾಪ್ತಿ ಪ್ರದೇಶದ ಹೊರಗೆ, ಕಾರ್ಯವ್ಯಾಪ್ತಿ ಮಿತಿಯ ಹೊರಗಡೆ ಅಗ್ನಿಶಾಮಕದಳವನ್ನು ಬೆಂಕಿಯನ್ನಾರಿಸಲು ಕಳುಹಿಸಿ ಕೊಡುವುದು.

ಎ) ಯಾವುದೇ ಪರಿಹಾರ, ಉದ್ದರಣೆ/ಉಳಿದುಕೊಂಡವುಗಳು, ರಕ್ಷಿಸಲಾದ, ಬಿಡಿಸಿಕೊಳ್ಳುವ ಕಾರ್ಯಗಳಲ್ಲಿ ತಮ್ಮ ದಳದ ಸದಸ್ಯರನ್ನು ನೇಮಕಾತಿ ಮಾಡಿ/ತೊಡಗಿಸಿಕೊಳ್ಳುವುದು.

ಏ) ನಿರ್ದೇಶಕರ, ಅಧಿಕಾರಗಳ, ಕರ್ತವ್ಯಗಳ, ಕಾರ್ಯಗಳ ನಿಯಂತ್ರಣ ಮತ್ತು ವಿನಿಮಯಗಳನ್ನು ಮಾಡುವುದು.

ಐ) ಸಾಮಾನ್ಯವಾಗಿ ಅಗ್ನಿಶಾಮಕದಳವನ್ನು ಒಳ್ಳೆಯ ದಕ್ಷ ರೀತಿಯಲ್ಲಿ ಕಾರ್ಯನಿರ್ವಹಿಸಲು ಸನ್ನದ್ಧವಾಗಿರುವಂತೆ ನಿರ್ವಹಣೆ ಮಾಡುವುದು.

10. ಅಗ್ನಿ ಅವಘಡ ಉಂಟಾದಾಗ ಸಂದರ್ಭದಲ್ಲಿ ಅಗ್ನಿ ಶಾಮಕದಳದ ಸದಸ್ಯರ ಅಧಿಕಾರ – ಈ ಅಧಿನಿಯಮ ಜಾರಿಯಲ್ಲಿರುವ , ಅದರ ವ್ಯಾಪ್ತಿಯಲ್ಲಿ ಬರುವ ಯಾವುದೇ ಅಗ್ನಿ ದುರಂತ ಸಂಭವಿಸಿದ್ದಲ್ಲಿ, ಆ ಸ್ಥಳದಲ್ಲಿ ಹಾಜರಿದ್ದ ಅಧಿಕಾರ ಹೊಂದಿದ ದಳದ ವ್ಯಕ್ತಿಯು – ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಬಹುದಾಗಿದೆ.

ಅ) ಅಗ್ನಿಶಮನ, ಬೆಂಕಿಯ ನಂದಿಸುವ ಕಾರ್ಯಜೀವ ಮತತು ಆಸ್ತಿಪಾಸ್ತಿಗಳನ್ನುಳಿಸಲು ನಡೆಸುವ ಕಾರ್ಯಗಳಿಗೆ ತನ್ನ ಹಾಜರಿ/ಉಪಸ್ಥಿತಿಯಿಂದ, ಮೇಲಿನ ಕಾರ್ಯಗಳಿಗೆ ಅಡ್ಡಿ ಮಾಡಿದಲ್ಲಿ, ಮಧ್ಯ ಪ್ರವೇಶಿಸಿದಲ್ಲಿ, ಅಂತಹ ವ್ಯಕ್ತಿಗಳನ್ನು ಆ ಜಾಗದಿಂದ ಹೊರಹಾಕಿ ಅಥವಾ ದಳದ ಇತರ ಸದಸ್ಯರಿಗೆ ಅಂತಹ ವ್ಯಕ್ತಿಗಳನ್ನು ಹೊರಹಾಕುವಂತೆ ಆಜ್ಞೆ ಮಾಡಬಹುದಾಗಿದೆ.

ಇ) ಬೆಂಕಿಯು ಹತ್ತಿ ಉರಿಯುತ್ತಿರುವಾಗ, ಅದರ ಸುತ್ತಮುತ್ತದ ಜಾಗ, ಯಾವುದೇ ರಸ್ತೆ, ಹಾದು ಹೋಗುವ ದಾರಿ, ರಸ್ತೆಯನ್ನು ಬಂದ್ ಮಾಡಬಹುದು, ಮುಚ್ಚಬಹುದಾಗಿದೆ.

ಈ) ಬೆಂಕಿಯನ್ನು ಆರಿಸುವ ಉದ್ದೇಶಕ್ಕಾಗಿ, ಹೋಸ್/ಪೈಪ್ ಎಳೆಯಲು, ಇತರ ಬೆಂಕಿ ಆರಿಸುವ ಉಪಕರಣಗಳಿಗೆ – ದಾರಿ ಅಡ್ಡಿಪಡಿಸುವ ಯಾವುದೇ ಕಟ್ಟಡವನ್ನು ಕೆಡವಬಹುದು, ಒಡೆದು ದಾರಿ ಮಾಡಿಕೊಳ್ಳಬಹುದು, ಹಾಗೆ ಮಾಡುವಾಗ ಅತಿ ಕಡಿಮೆ ಜಖಂ ಹಾನಿಯಾಗುವಂತೆ ನಿಗಾ ವಹಿಸುವುದು.

1) ಉ) ಬೆಂಕಿಯನ್ನು ಅರಿಸಲು, ನಿಯಂತ್ರಣ ಮಾಡಲು, ಹರಡದಂತೆ ಮಾಡಲು, ಆ ಪ್ರದೇಶದ ನೀರು ಸರಬರಾಜು ಪ್ರಾಧಿಕಾರವು ನೀರಿನ ಮುಖ್ಯ ಕೊಳವೆ/ಮೈನ್ ಪೈಪ್ ಗಳನ್ನು ನಿರ್ದಿಷ್ಟ ಒತ್ತಡದಲ್ಲಿ ನೀರನ್ನು ಸರಬರಾಜು ಮಾಡುವಂತೆ, ಎಲ್ಲಿ ಬೆಂಕಿ ಹತ್ತಿಕೊಂಡು ಉರಿಯುತ್ತಿದೆಯೋ ಅದರ ಸುತ್ತ ಮುತ್ತ, ಇರುವ ಯಾವುದೇ ಜಲಾಶಯ, ಹೊಳೆ, ಕೆರೆ, ಸಿಸ್ಟರ್ನ್, ಯಾವುದೇ ಜಲಮೂಲವನ್ನುಪಯೋಗಿಸಿ, ಅದು ಸರ್ಕಾರಿ ಅಥವಾ ಖಾಸಗೀ ಸ್ವಾಮ್ಯದ್ದಿರಬಹುದಾದರೂ ಸಹ, ಅಧಿಕಾರವನ್ನು ಚಲಾಯಿಸಬಹುದಾಗಿದೆ.

1) ಋ) ಪೊಲೀಸ್ ಠಾಣೆಯ ಠಾಣಾಧಿಕಾರಿಯಾಗಿದ್ದಲ್ಲಿ , ಅಥವಾ ಆ ರೀತಿಯ ನಿಹಿತ ಅಧಿಕಾರವನ್ನು ಚಲಾಯಿಸಿ, ಬೆಂಕಿ ಆರಿಸುವ ಕೆಲಸಕ್ಕೆ ಅಡ್ಡಿ ಪಡಿಸುವವರನ್ನು ದೂರ ಹೋಗುವಂತೆ, ಜಾಗ ಬಿಡುವಂತೆ, ಆ ರೀತಿ ಸೇರಿದ ಜನ ಸಂದಣಿಯನ್ನು ಕಾನೂನು ಬಾಹಿರ ಸಭೆ/ಜನ ಸೇರುವಿಕೆಯೆಂದು, ಭಾವಿಸಿ, ಆ ಅಧಿಕಾರಿಗೆ ಪೊಲೀಸ್ ಅಧಿಕಾರಿಗೆ ಲಭ್ಯವಿರುವ ಎಲ್ಲಾ ವಿಶೇಷ ಸವಲತ್ತುಗಳು, ಸಂರಕ್ಷಣೆ, ಉನ್ಮುಕ್ತಿ/ಇಮ್ಯುನಿಟಿ, ಆ ಸಮಯದಲ್ಲಿ ಅಧಿಕಾರ ಚಲಾಯಿಸಲು ವಿಶೇಷ ಸವಲತ್ತುಗಳನ್ನು ಒದಗಿಸಲಾಗುವುದು.

2) ಎ) ಬೆಂಕಿಯನ್ನು ಆರಿಸಲು ಅಥವಾ ಜೀವ ಅಥವಾ ಆಸ್ತಿ ಪಾಸ್ತಿಗಳನ್ನು ರಕ್ಷಣೆಗಾಗಿ ಅವಶ್ಯಕವೆಂದು ಅವರು ಸಾಮಾನ್ಯವಾಗಿ ಭಾವಿಸಿ/ನಿರ್ಧರಿಸಿದಂತೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬಹುದು.

3) 11) ನೀರು ಸರಬರಾಜು ವ್ಯವಸ್ಥೆ ಮಾಡಲು ನಿರ್ದೇಶಕರ ಅಧಿಕಾರ: ರಾಜ್ಯ ಸರ್ಕಾರದ ಪೂರ್ವಭಾವಿ ಅನುಮತಿಯೊಡನೆ ನಿರ್ದೇಶಕರು, ನೀರು ಸರಬರಾಜು ಪ್ರಾಧಿಕಾರದ ಅಧಿಕಾರಿಗಳೊಡನೆ ಒಪ್ಪಂದವನ್ನು ಮಾಡಿಕೊಂಡು, ಕರಾರಿನಲ್ಲಿ ತಿಳಿಸಿರುವ ರೀತಿಯಲ್ಲಿ ಹಣ ಪಾವತಿಯ ರೀತಿ, ರಿವಾಜುಗಳ ಪ್ರಕಾರ ಬೆಂಕಿ ಆರಿಸಲುಬೇಕಾದಷ್ಟು ನೀರನ್ನು ಪಡೆದುಕೊಳ್ಳಬಹುದಾಗಿದೆ.

4) 12) ಸಹಾಯ/ಸಹಕಾರಗಳಿಗಾಗಿ, ಕರಾರು ಮಾಡಿಕೊಳ್ಳಲು ನಿರ್ದೇಶಕರ ಅಧಿಕಾರ : ರಾಜ್ಯ ಸರ್ಕಾರದ ಪೂರ್ವಭಾವಿ ಅನುಮತಿಯೊಡನೆ ನಿರ್ದೇಶಕರು, ಬೆಂಕಿ ಆರಿಸುವ ಸಲುವಾಗಿ ಅವಶ್ಯವಾದ ಸಿಬ್ಬಂದಿ, ಅಥವಾ ಉಪಕರಣಗಳನ್ನು, ಅಥವಾ ಇವೆರಡನ್ನೂ ಹೊಂದಿರುವ ಪ್ರಾಧಿಕಾರದಿಂದ, ಅಂತಹ ಸೇವೆಗಳನ್ನು ಕರಾರು ಮಾಡಿಕೊಂಡು

ಅದರಡಿಯಲ್ಲಿ ಹಣ ಪಾವತಿಯ ಷರತ್ತುಗಳ, ಈ ಅಧಿನಿಯಮದ ಉಪಖಂಡಗಳು ಜಾರಿಯಲ್ಲಿರುವ ಸ್ಥಳಗಳಲ್ಲಿ ಪಡೆದುಕೊಳ್ಳಬಹುದಾಗಿದೆ.

5) 13. ಪ್ರತಿಬಂಧಕಾತ್ಮಕ ಕ್ರಮಗಳು :

6) 1)ಯಾವುದೇ ಪ್ರದೇಶದಲ್ಲಿ, ಯಾವುದೇ ರೀತಿಯ ಕಟ್ಟಡಗಳ ಮಾಲೀಕರು, ಅನುಭವದಾರರು, ಅಥವಾ ಯಾವುದೇ ವರ್ಗದ ಕಟ್ಟಡಗಳು, ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಬೆಂಕಿ ಅಪಘಾಥ ಸಂಭವಿಸುವ ಸಾಧ್ಯತೆ ಇರುವ ರೀತಿಯಲ್ಲಿ ಆ ಕಟ್ಟಡಗಳನ್ನುಪಯೋಗಿಸುತ್ತಿದ್ದಲ್ಲಿ, ರಾಜ್ಯ ಸರ್ಕಾರವು ಅಧಿಕೃತ ಗೆಜೆಟ್

7) ನಲ್ಲಿ ಅಧಿಸೂಚನೆಯೊಂದನ್ನು ಹೊರಡಿಸಿ ಅಂತಹ ಅಧಿಸೂಚನೆಯಲ್ಲಿ ನಿರ್ದಿಷ್ಟ ಪಡಿಸಿದ ಮುಂಜಾಗರೂಕತಾ ಕ್ರಮವನ್ನು ಆಯಾ ಕಟ್ಟಡಗಳ ಮಾಲೀಕರು/ಅನುಭವದಾರರು ತೆಗೆದುಕೊಳ್ಳುವುದು.

8) ಉಪ ಕಲಂ (1) ರಡಿಯಲ್ಲಿ ಅಧಿಸೂಚನೆಯನ್ನು ಹೊರಡಿಸಿದ್ದಲ್ಲಿ, ಬೆಂಕಿ ಅನಾಹುತಕ್ಕೆ ಕಾರಣವಾಗಬಹುದಾದ ವಸ್ತುಗಳನ್ನು ತೆಗೆಯುವಂತೆ, ನಿರ್ದೇಶಕರು ಅಥವಾ ರಾಜ್ಯ ಸರ್ಕಾರದಿಂದ ಅಧಿಕೃತ ಗೊಳಿಸಿದ ಇನ್ನಾವುದೇ ಅಧಿಕಾರಿಯು, ಅವುಗಳನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಲು ಆಜ್ಞೆ ಮಾಡಬಹುದಾಗಿದೆ. ಮತ್ತು ಆ ರೀತಿಯ ಆಜ್ಞೆಯನುಸಾರವಾಗಿ ಕಾರ್ಯ ನಿರ್ವಹಿಸಲು, ಸ್ಥಳಾಂತರಿಸಲು, ವಿಫಲರಾದ ಮಾಲಿಕರ ಅಥವಾ ಅನುಭವದಾರರ ಮೇಲೆ, ಅ ಬಗೆಗೆ ಅರ್ಜಿಯನ್ನು ಸಲ್ಲಿಸಲು ಅವಕಾಶ ಕಲ್ಪಿಸಿ, ಅಂಥಹ ವಸ್ತುಗಳು, ಕಟ್ಟಡವನ್ನು ವಶಪಡಿಸಿಕೊಳ್ಳಬಹುದು. ಸ್ಥಗಿತಗೊಳಿಸಿ, ಅಂಥಹ ವಸ್ತುಗಳನ್ನು ಆ ಜಾಗದಿಂದ ಹೊರಗೆ ಹಾಕಬಹುದಾಗಿದೆ.

ಅಧ್ಯಾಯ - I ಗಿ

ದಳದ ನಿರ್ವಹಣೆಯ ಖರ್ಚು ವೆಚ್ಚಗಳು.

14. ದಳದ ಖರ್ಚು ವೆಚ್ಚಗಳು.

1) ಈ ದಳದ ನಿರ್ವಹಣೆಯ ಪೂರಾ ಖರ್ಚನ್ನು ರಾಜ್ಯದ ಸಂಚಿತ ನಿಧಿಯಿಂದ ಭರಿಸಲಾಗುವುದು.

2) ಯಾವುದೇ ಪ್ರಚಲಿತ ಕಾನೂನು/ನಿಯಮಗಳಲ್ಲಿ, ಏನೇ ಹೇಳಿರಲಿ, ಉಲ್ಲೇಖಿತವಾಗಿರಲಿ, ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಗದಿ ಪಡಿಸಿದ, ಖರ್ಚಿನಲ್ಲಿನ ತನ್ನ ಭಾಗವನ್ನು ಕಾಲಕಾಲಕ್ಕೆ ನಿರ್ದೇಶನ ಮಾಡುವಂತೆ, ಖರ್ಚು, ವೆಚ್ಚಗಳನ್ನು, ಈ ಅಧಿನಿಯಮವು ಜಾರಿಯಲ್ಲಿರುವ ಆಯಾ ಪ್ರದೇಶಗಳಲ್ಲಿನ ಸ್ಥಳೀಯ ಪ್ರಾಧಿಕಾರವು ತನ್ನ ಭಾಗದ ಖರ್ಚನ್ನು ಭರಿಸತಕ್ಕದ್ದು.

15. ಅಗ್ನಿಶಮನ ತೆರಿಗೆ ಹಾಕುವುದು.

1) ಈ ಅಧಿನಿಯಮವು ಜಾರಿಯಲ್ಲಿರುವ ಪ್ರದೇಶಗಳಲ್ಲಿರುವ ಜಮೀನು ಮತ್ತು ಕಟ್ಟಡಗಳನ್ನು ಮತ್ತು ಯಾವುದೇ ಹೆಸರಿನಲ್ಲಿ ಆಸ್ತಿ ತೆರಿಗೆಯನ್ನು ಸ್ಥಳೀಯ ಪ್ರಾಧಿಕಾರವು ಹಾಕಲಾಗುವುದೊ, ಅವುಗಳ ಮೇಲೆ ರಾಜ್ಯ ಸರ್ಕಾರವು ಸೆಸ್/ಉಪಕರವನ್ನು ವಿಧಿಸಬಹುದಾಗಿದೆ.

2) ಅಗ್ನಿಶಮನ ಉಪಕರವನ್ನು ಆಸ್ತಿ ತೆರಿಗೆಯ ಮೇಲೆ, 10% ಮೀರದಂತೆ, ನಿಗದಿ ಪಡಿಸಿದ ದರದಲ್ಲಿ, ರಾಜ್ಯ ಸರ್ಕಾರವು ನಿರ್ಧರಿಸಿದಂತೆ ಅಧಿಕೃತ ಗೆಜೆಟ್ ಅಧಿಸೂಚನೆಯ ಮೇರೆಗೆ ವಿಧಿಸಲಾಗುವುದು.

16. ಅಗ್ನಿ ಶಮನ ತೆರಿಗೆ ನಿರ್ಧಾರಣೆಯ ರೀತಿ, ಸಂಗ್ರಹ, ಇತ್ಯಾದಿ.

1) ಆಸ್ತಿ ತೆರಿಗೆಯ ನಿರ್ಧರಣೆ, ಸಂಗ್ರಹಣೆ ಮತ್ತು ಜಾರಿಗೊಳಿಸಲು ಪ್ರಸ್ತುತ ಕಾಲಕ್ಕೆ ಅಧಿಕಾರ ಚಾಲ್ತಿ ಕಾನೂನುಗಳ ಪ್ರಕಾರ, ಹೊಂದಿರುವ ಸ್ಥಳೀಯ ಪ್ರಾಧಿಕಾರವು ರಾಜ್ಯ ಸರ್ಕಾರದ ಪರವಾಗಿ, ಮತ್ತು ಈ ಅಧಿನಿಯಮದಡಿಯಲ್ಲಿ ಮಾಡಿದ ಯಾವುದೇ ನಿಯಮಗಳಿಗನುಸಾರವಾಗಿ, ಆಸ್ತಿ ತೆರಿಗೆಯನ್ನು ನಿರ್ಧರಣೆ ಮಾಡುವ ರೀತಿಯಲ್ಲಿಯೇ, ಸಂಗ್ರಹಣೆ, ಪಾವತಿಮಾಡುವ ರೀತಿಯಲ್ಲಿಯೇ, ಅಗ್ನಿಶಮನ ತೆರಿಗೆಯನ್ನು ಸಹ ನಿರ್ಧರಣೆ, ಸಂಗ್ರಹ ಪಾವತಿ/ವಸೂಲಿ ಮಾಡಬಹುದಾಗಿದೆ. ಮತ್ತು ಈ ಉದ್ದೇಶಕ್ಕಾಗಿ, ಮೇಲ್ಕಾಣಿಸಿದ ಕಾಯಿದೆಗನುಸಾರವಾಗಿ ವಿಹಿತವಾಗಿರುವ ಯಾವುದೇ ಅಥವಾ ಎಲ್ಲಾ ಅಧಿಕಾರಗಳನ್ನು ಸಹ ಚಲಾಯಿಸಬಹುದಾಗಿದೆ. ಅದರಲ್ಲಿ ರಿಟರ್ನ, ವರದಿ ಮಾಡುವಿಕೆ, ಮೇಲ್ಮನವಿ ಪುನರ್ವಿಮರ್ಶೆ, ಸಂದರ್ಭದ ಪ್ರಸ್ತಾಪಗಳು, ಮತ್ತು ದಂಡ, ಜುಲ್ಮಾನೆಗಳು ಅದರಂತೆಯೇ ಅನ್ವಯವಾಗುತ್ತವೆ.

2) ರಾಜ್ಯ ಸರ್ಕಾರವು ನಿರ್ಧರಿಸಿದಂತೆ ಒಟ್ಟಾರೆ ಸಂಗ್ರಹವಾದ ಅಗ್ನಿ ಶಾಮಕ ತೆರಿಗೆಯ ಒಂದು ಭಾಗವನ್ನು ತೆರಿಗೆ ಸಂಗ್ರಹದ ಖರ್ಚನ್ನು ಭರಿಸಲು ಒಟ್ಟು ಮೊತ್ತದಲ್ಲಿ ಕಡಿತ ಮಾಡಿಕೊಳ್ಳಲಾಗುವುದು.

3) ಈ ಅಧಿನಿಯಮದಡಿಯಲ್ಲಿ ಸಂಗ್ರಹಗೊಂಡ ತೆರಿಗೆಯು ಅದರಲ್ಲಿ ತೆರಿಗೆ ಸಂಗ್ರಹಣ ವೆಚ್ಚವನ್ನು ಕಡಿತಗೊಳಿಸಿ ಉಳಿದ ಭಾಗವನ್ನು, ಸರ್ಕಾರ ನಿಗದಿಪಡಿಸಿದ ಅವಧಿಗನುಸಾರವಾಗಿ, ನಿಯಮತಿವಾದ ಕಾಲಗಳಲ್ಲಿ, ರಾಜ್ಯ ಸರ್ಕಾರಕ್ಕೆ ಪಾವತಿ ಮಾಡಲಾಗುವುದು.

17. ಶುಲ್ಕಗಳು.

1) ಈ ಅಧಿನಿಯಮವು ಜಾರಿಯಲ್ಲಿರುವ  ವ್ಯಾಪ್ತಿ ಪ್ರದೇಶದ ಹೊರಗೆ, ಬೆಂಕಿಯನ್ನಾರಿಸಲು ಅಂತಹ ಪ್ರದೇಶದ ಸುತ್ತ ಮುತ್ತ ಪ್ರದೇಶಗಳಿಗೆ ಅಗ್ನಿ ಶಾಮಕದಳದ ಸದಸ್ಯರನ್ನು ಬೆಂಕಿಯನ್ನು ಆರಿಸಲು ಕಳುಹಿಸಿ ಕೊಟ್ಟಲ್ಲಿ, ಬೆಂಕಿ ಹತ್ತಿದ , ಉರಿದ, ಅದರಿಂದ ಮುಂದೆ ಚಾಚಿದ ಹುಲ್ಲು ಬೆಣೆಗೆ ವಿಸ್ತರಿಸಿದ ಬೆಂಕಿಯನ್ನಾರಿಸಲು ಅಂಥಹ ಕಟ್ಟಡದ ಮಾಲಿಕ/ಅನುಭವದಾರರು, ಇದರ ಬಗೆಗೆ ನಿಗದಿ ಪಡಿಸಿದ ಶುಲ್ಕವನ್ನು ಪಾವತಿಸಲು ಬದ್ದರಾಗಿರುತ್ತಾರೆ.

ಅದಾಗ್ಯೂ, ಹುಲ್ಲು ಬಣೆ, ಮೇವುಗಳ ರಾಶಿ, ಗುಡಿಸಲು, ಜೋಪಡಿಗಳಲ್ಲಿ ಬೆಂಕಿ ಹತ್ತಿದಾಗ, ಅಥವಾ ಬೆಂಕಿ ಹರಡಿ, ಚಾಚಿದಾಗ, ಅವುಗಳನ್ನಾರಿಸಲು ಅಗ್ನಿಶಾಮಕದಳವನ್ನು ಕಳುಹಿಸಿ ಕೊಟ್ಟಲ್ಲಿ, ಅಂತಹ ಜಾಗದ ಮಾಲಿಕ/ಅನುಭವದಾರರು ಎಲ್ಲಿ ಬೆಂಕಿ ಹತ್ತಿತೋ, ಹರಡಿತೋ ಅವರು ಅ ರೀತಿಯ ಶುಲ್ಕವನ್ನು ಕಟ್ಟಲು ಬದ್ಧರಲ್ಲ.

2) ಉಪಕಲಂ (1) ರಲ್ಲಿ ಪ್ರಸ್ತಾಪಿತ ಶುಲ್ಕವು, ಈ ಬಗೆಗೆ ತಗಾದೆ ಸೂಚನೆ ನೀಡಿದ/ಜಾರಿಯಾದ 30 ದಿನಗಳೊಳಗೆ ನಿರ್ದೇಶಕರಿಗೆ ಪಾವತಿಸತಕ್ಕದ್ದು, ಆ ರೀತಿ ಪಾವತಿ ಮಾಡದಿದ್ದಲ್ಲಿ ಅದನ್ನು ಭೂ ಕಂದಾಯ ಬಾಕಿಯ ರೀತಿಯಲ್ಲಿ ವಸೂಲು ಮಾಡಲಾಗುವುದು.

ಅಧ್ಯಾಯ - I ಗಿ

ಅಗ್ನಿಶಾಮಕ ದಳದ ಸ್ಥಳೀಯ ಪ್ರಾಧಿಕಾರದ ಆಸ್ತಿ ಮತ್ತು ಹೊಣೆಗಳ ಜವಾಬ್ದಾರಿಗಳ ವರ್ಗಾವಣೆ.

18. ಅಗ್ನಿಶಾಮಕ ದಳದ ಸ್ಥಳೀಯ ಪ್ರಾಧಿಕಾರದ ಆಸ್ತಿ ಮತ್ತು ಹೊಣೆಗಳ ಜವಾಬ್ದಾರಿಗಳ ವರ್ಗಾವಣೆ.

1) ಸ್ಥಳೀಯ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಪ್ರದೇಶದಲ್ಲಿ ಈ ಅಧಿನಿಯಮವು ಜಾರಿಗೆ ಬಂದ ದಿನಾಂಕದಂದು (ಇನ್ನು ಮುಂದೆ ಈ ಆಧ್ಯಾಯದಲ್ಲಿ ಅದನ್ನು ನಿಗದಿತ ದಿನಾಂಕ ಎಂದು ಕರೆಯಲ್ಪಡುವುದು ),  ಅಗ್ನಿ ಶಾಮಕ

ದಳಕ್ಕೆ ಸೇರಿದ, ಆ ಸ್ಥಳೀಯ ಪ್ರಾಧಿಕಾರಕ್ಕೆ ಸಂಬಂಧಿಸಿದ, ಅವುಗಳು ರಾಜ್ಯ ಸರ್ಕಾರಕ್ಕೆ ವರ್ಗಾವಣೆಗೊಂಡು, ಸರ್ಕಾರದಲ್ಲಿ ನಿಹಿತಗೊಳ್ಳುತ್ತದೆ.

2) ಅಗ್ನಿಶಾಮಕದಳಕ್ಕೆ ಸಂಬಂಧಿಸಿದ ಆಸ್ತಿಗಳು, ಅದರಲ್ಲಿ, ಅಗ್ನಿಶಾಮಕದಳಕ್ಕೆ ಸೇರಿದ ಎಲ್ಲಾ ಹಕ್ಕುಗಳೂ, ಅಧಿಕಾರಗಳು, ಮತ್ತು ಎಲ್ಲಾ ಸ್ಥಿರ ಮತ್ತು ಚರ ಆಸ್ತಿಗಳು, ಅದರಲ್ಲಿ ವಿಶೇಷವಾಗಿ, ಅಗ್ನಿಶಾಮಕ ವಸ್ತುಗಳ, ಆಸ್ತಿ ಮತ್ತು ಆ ಆಸ್ತಿಯಲ್ಲಿನ, ಅದರಿಂದ ಉದ್ಭವಿಸುವ ಎಲ್ಲಾ ಹಕ್ಕು ಭಾಧ್ಯತೆಗಳು, ಅವು ಸ್ಥಳೀಯ ಪ್ರಾಧಿಕಾರದ

ವಶದಲ್ಲಿದ್ದುದು, ಸ್ಥಳೀಯ ಪ್ರಾಧಿಕಾರವು ನಿರ್ವಹಿಸಿದ, ಸುಪರ್ದಿನಲ್ಲಿರುವ, ಅಗ್ನಿಶಾಮಕದ ದಳಕ್ಕೆ ಸಂಬಂಧಿಸಿದ ಲೆಕ್ಕ ಪತ್ರಗಳು, ಪುಸ್ತಕಗಳು ಅಥವಾ ದಸ್ತಾವೇಜುಗಳು, ಸೇರಿರುತ್ತದೆ. ಹೊಣೆಗಾರಿಕೆಗಳಲ್ಲಿ, ಎಲ್ಲಾ ಋಣ, ಸಾಲಗಳು, ಯಾವುದೇ ರೀತಿಯ ಭಾಧ್ಯತೆ, ಕರ್ತವ್ಯಗಳು, ಆವಾಗ ಜಾಲ್ತಿಯಲ್ಲಿದ್ದುದು ಮತ್ತು ಸ್ಥಳೀಯ ಪ್ರಾಧಿಕಾರದ ಅಗ್ನಿಶಾಮಕ ದಳಕ್ಕೆ ಸಂಬಂದಿಸಿದ್ದು, ಒಳಗೊಂಡಿರುತ್ತದೆ/ ಸೇರಿರುತ್ತದೆ.

19. ಭವಿಷ್ಯನಿಧಿ/ಪ್ರಾವಿಡೆಂಟ್, ವಯೋನಿವೃತ್ತಿನಿಧಿ ಮತ್ತಿತರ ಅದೇ ರೀತಿಯ ನಿಧಿಗಳು.

1) ಕಲಂ 18 ರ ಉಪ ಕಲಂ (1) ರಲ್ಲಿ ಪ್ರಸ್ತಾಪಿಸಿದ, ಸ್ಥಳೀಯ ಪ್ರಾಧಿಕಾರವು, ತನ್ನ ಸ್ಥಳೀಯ ಪ್ರಾಧಿಕಾರದ ನೌಕರರ ಉಪಯೋಗಕ್ಕಾಗಿ/ಸಹಾಯಕ್ಕಾಗಿ, ಯಾವುದೇ ಭವಿಷ್ಯನಿಧಿ/ಪ್ರಾವಿಡೆಂಟ್, ಫಂಡ್, ವಯೋನಿವೃತ್ತಿನಿಧಿ ಮತ್ತಿತರ ಅದೇ ರೀತಿಯ ನಿಧಿಗಳನ್ನು ನಿಗದಿತ ದಿನಾಂಕದಂದು, ಅಂಥಹ ನಿಧಿಗಳಲ್ಲಿ ಜಮಾಆಗಿರುವ ಅದರೊಂದಿಗೆ ಅ ರೀತಿಯ ನಿಧಿಗೆ ಸೇರಿದ ಬೇರ್ಯಾವುದೇ ಆಸ್ತಿಯನ್ನು , ಎಲ್ಲಾ ಸ್ಥಳೀಯ ಪ್ರಾಧಿಕಾರಕ್ಕೆ ಸೇರಿದ, ಅಂಥಹ ನೌಕರರು ಕಲಂ 21 ರ ಪ್ರಕಾರ ರಾಜ್ಯ ಸರ್ಕಾರದ ನೌಕರರಾಗಿ, ಎಲ್ಲಾ ಅಂಥಹ ಆಸ್ತಿಗಳೂ ಸಹ, ರಾಜ್ಯ ಸರ್ಕಾರಕ್ಕೆ ವರ್ಗಾವಣೆಗೊಂಡು, ನಿಗದಿತ ದಿನಾಂಕದಂದು, ರಾಜ್ಯ ಸರ್ಕಾರದಲ್ಲಿ ವಿಹಿತವಾಗಿರುತ್ತದೆ.

2) ಈ ಬಗೆಗಿನ, ಹಂಚುವಿಕೆ, ಭಾಗಮಾಡುವಿಕೆ, ಉಪ ಕಲಂ(1) ವನ್ನು ರಾಜ್ಯ ಸರ್ಕಾರವು ಮಾಡುತ್ತಿದ್ದು, ಈ ಬಗೆಗಿನ ರಾಜ್ಯ ಸರ್ಕಾರದ ನಿರ್ಧಾರವು ಅಚಿತಿಮವಾಗಿದ್ದು, ಸ್ಥಳೀಯ ಸಂಸ್ಥೆಗಳು ಇದಕ್ಕೆ ಬದ್ದವಾಗಿರುತಕ್ಕದ್ದು.

20. ದಳದ ಸ್ಥಳೀಯ ಪ್ರಾಧಿಕಾರದ ದಳದ ಆಸ್ತಿ ಮತ್ತು ಹೊಣೆಗಳ ಜವಾಬ್ದಾರಿಗಳ ವರ್ಗಾವಣೆಯ ಸಾಮಾನ್ಯ ಪರಿಣಾಮ.

1) ನಿಗದಿತ ದಿನಾಂಕದ ನಿಕಟಪೂರ್ವ ದಿನದಂದು ಚಾಲ್ತಿಯಲ್ಲರುವ ಯಾವುದೇ ರೀತಿಯ ಎಲ್ಲಾ ಕರಾರುಗಳು, ಒಪ್ಪಂದಗಳು, ಮತ್ತಿತರ ಲಿಖಿತ ಪತ್ರಗಳು, ಸಾಧನಗಳು, ಅಥವಾ ನಿಗದಿತ ದಿನಾಂಕದ ಹಿಂದಿನ ದಿನದಂದು

ಪರಿಣಾಮ ಹೊಂದಿರುವ, ಅದಕ್ಕೆ ಕಲಂ 18 ರ ಉಪ ಕಲಂ (1) ರಲ್ಲಿ ಪ್ರಸ್ತಾಪಿಸಲ್ಪಟ್ಟ ಸ್ಥಳೀಯ ಪ್ರಾಧಿಕಾರವು ಒಂದು ಪಕ್ಷಕಾರರಾಗಿರುವುದೋ, ಅವು ಸ್ಥಳೀಯ ಪ್ರಾಧಿಕಾರದ ಅಗ್ನಿಶಾಮಕದಳಕ್ಕೆ ಸಂಬಂಧಿಸಿದೆಯೋ, ಪೂರ್ಣವಾಗಿ ಜಾರಿಯಲ್ಲಿದ್ದು ಮತ್ತು ರಾಜ್ಯ ಸರ್ಕಾರದ ಪರವಾಗಿ ಅಥವಾ ವಿರುದ್ದವಾಗಿ, ಅಯಾ ಪ್ರಕರಣಕ್ಕೆ ಸಂಬಧಿಸಿದಂತೆ, ಮತ್ತು ಪೂರ್ಣವಾಗಿ ಪರಿಣಾಮಕಾರಿಯಾಗಿ, ಜಾರಿಮಾಡಲ್ಪಡುವುದು. ಸ್ಥಳೀಯ ಪ್ರಾಧಿಕಾರಕ್ಕೆ ಬದಲಾಗಿ ರಾಜ್ಯ ಸರ್ಕಾರವೇ ಪಕ್ಷಕಾರವಾಗಿದ್ದಲ್ಲಿ ಅಥವಾ ರಾಜ್ಯ ಸರ್ಕಾರದ ಪರವಾಗಿ ಕರಾರು ಮಾಡಿಕೊಂಡು, ಅಥವಾ ಅದರ ಪರವಾಗಿ ಒಪ್ಪಂದ ಮಾಡಿಕೊಳ್ಳುವಂತೆ ಭಾವಿಸಲಾಗುವುದು.

2) ನಿಗದಿತ ದಿನದಂದು ಯಾವುದೇ ದಾವೆ, ಮೇಲ್ಮನವಿ, ಅಥವಾ ಇತರ ಯಾವುದೇ ರೀತಿಯ ನ್ಯಾಯಾಲಯದ ನಡವಳಿಕೆಗಳು ಸ್ಥಳೀಯ ಸಂಸ್ಥೆಯ ಪರವಾಗಿ ಆಗಲೀ, ವಿರುದ್ದವಾಗಿ ಆಗಲೀ, ನಡೆಯುತ್ತಿದ್ದು, ಬಾಕಿ ಉಳಿದಿದ್ದಲ್ಲಿ, ಅವು ಅಂಥಹ ಸ್ಥಳೀಯ ಸಂಸ್ಥೆಯ ಅಗ್ನಿಶಾಮಕದಳಕ್ಕೆ ಸಂಬಂಧಿಸಿದ್ದಲ್ಲಿ, ಅದು ಕೊನೆಗೊಳಿಸುವುದಿಲ್ಲ/ಉಪಶಮನಗೊಳ್ಳುವುದಿಲ್ಲ, ಅಥವಾ ಯಾವುದೇ ಪೂರ್ವ ನಿರ್ಧಾರಿತ, ಆಸ್ತಿ ಪಾಸ್ತಿಗಳ ಮೇಲೆ ಪರಿಣಾಮ ಬೀರುವುದಿಲ್ಲ. ಅರ್ಧಕ್ಕೆ ನಿಂತು ಹೊಗುವುದಿಲ್ಲ. ಯಾವುದೇ ರೀತಿಯಲ್ಲಿ ವರ್ಗಾವಣೆಯಿಂದ ಪೂರ್ವಗ್ರಹ, ಪ್ರತಿಕೂಲ ಪ್ರಭಾವವು, ಅವು ಅಗ್ನಿ ಶಾಮಕ ದಳಕ್ಕೆ ಸಂಬಂದಿಸದಂತೆ ಯಾವುದೇ ಪರಿಣಾಮವಿರುವುದಿಲ್ಲ. ಅದರೆ, ಮೊಕದ್ದಮೆ, ಮೇಲ್ಮನವಿ ಅಥವಾ ಇತರ ನಡವಳಿಕೆಗಳು ಮುಂದುವರೆಯಬಹುದಾಗಿದೆ, ವ್ಯಾಜ್ಯ ನಡೆಸಬಹುದಾಗಿದೆ. ಹೊರ ರಾಜ್ಯ ಸರ್ಕಾರದ ಪರವಾಗಿ ಅಥವಾ ವಿರುದ್ಧವಾಗಿ ಜಾರಿ ಮಾಡಬಹುದಾಗಿದೆ, ಪ್ರಕರಣ ಮುಂದುವರೆಸಬಹುದಾಗಿದೆ.

21. ಸ್ಥಳೀಯ ಪ್ರಾಧಿಕಾರದ ನೌಕರರ ಸೇವೆಯ ವರ್ಗಾವಣೆ.

1. ಕಲಂ 18 ರ ಉಪ ಕಲಂ (1) ರಲ್ಲಿ ಪ್ರಸ್ತಾಪಿಸಲ್ಪಟ್ಟ ಸ್ಥಳೀಯ ಪ್ರಾಧಿಕಾರ/ಸ್ಥಳೀಯ ಸಂಸ್ಥೆಯ ಪ್ರತಿಯೊಬ್ಬ ಪೂರ್ಣಕಾಲೀನ ನೌಕರ ಮತ್ತು ಅಂಥಹ ನೌಕರರು, ಪೂರ್ತಿಯಾಗಿ ಅಥವಾ ಮುಖ್ಯವಾಗಿ ಅಂಥಹ ಸ್ಥಳೀಯ ಸಂಸ್ಥೆಯಿಂದ ಅಗ್ನಿಶಾಮಕದಳದ ಸಂಬಂಧವಾಗಿ, ನಿಗದಿತ ದಿನಾಂಕದ ತಕ್ಷಣದ ಹಿಂದಿನ, ನಿಕಟ ಪೂರ್ವ ಹಿಂದಿನ ದಿನದಂದು, ಅಂತಹ ನಿಗದಿತ ದಿನಾಂಕದಿಂದ, ರಾಜ್ಯ ಸರ್ಕಾರದ ನೌಕರರಾಗಿ ಪರಿವರ್ತನೆ ಹೊಂದುತ್ತಾರೆ, ಮುಂಚಿನ ಷರತ್ತುಗಳು, ಅವಧಿ, ಅದೇ ಸಂಬಳ, ಷರತ್ತುಗಳು ಮತ್ತು ಅದೇ ವಿಷಯಗಳು, ಸ್ಥಳೀಯ ಸಂಸ್ಥೆ, ಅದರ ಆಸ್ತಿಗಳು ಮತ್ತು ಹೊಣೆಗಾರಿಕೆಗಳು, ಅಗ್ನಿ ಶಾಮಕದ ದಳಕ್ಕೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರಕ್ಕೆ ವರ್ಗಾಯಿಸಲ್ಪಟ್ಟಿಲ್ಲವೋ, ಅಷ್ಟರ ಮಟ್ಟಿಗೆ, ಮತ್ತು ಅದೇ ರೀತಿ ಮುಂದುವರೆಯುತ್ತಾರೆ, ಎಲ್ಲಿಯವರೆಗೆ, ರಾಜ್ಯ ಸರ್ಕಾರವು ಅವರ ಸೇವಾ ಷರತ್ತುಗಳು, ಸಂಬಳ, ಸಾರಿಗೆ ಮೊದಲಾದುವುಗಳನ್ನು

ಬದಲಾಯಿಸುವುದಿಲ್ಲವೋ ಅಲ್ಲಿಯವರೆಗೆ ಹಾಗೆಯೇ ಮುಂದುವರೆಯುತ್ತದೆ. 22. ಆಸ್ತಿ ಮತ್ತು ಅದಕ್ಕೆ ದಸ್ತಾವೇಜು /ದಾಖಲಾತಿಗಳ ಸುಪರ್ದಿಯನ್ನು ಹಸ್ತಾಂತರಿಸಿ/ಕೊಡಮಾಡುವ ಕರ್ತವ್ಯ.

1) ಕಲಂ 18 ರಡಿಯಲ್ಲಿ ಯಾವುದೇ ಆಸ್ತಿಯನ್ನು ರಾಜ್ಯ ಸರ್ಕಾರಕ್ಕೆ ವರ್ಗಾಯಿಸಲ್ಪಟ್ಟು, ವಿಹಿತಗೊಳಿಸಲ್ಪಟ್ಟಿದೆಯೋ, ಪ್ರತಿಯೊಬ್ಬ ವ್ಯಕ್ತಿ, ಯಾರ ಸುಪರ್ದಿಯಲ್ಲಿ ಅಥವಾ ಅಭಿರಕ್ಷೆಯಲ್ಲಿ ಅಥವಾ ಯಾರ ನಿಯಂತ್ರಣದಲ್ಲಿ ಆಸ್ತಿಗಳಿವೆಯೋ, ತಕ್ಷಣದಲ್ಲಿ ಅಂಥಹ ಆಸ್ತಿಯನ್ನು ರಾಜ್ಯ ಸರ್ಕಾರದ ವಶಕ್ಕೆ ಒಪ್ಪಿಸತಕ್ಕದ್ದು ಮತ್ತು ಆ ರೀತಿ ವರ್ಗಾಯಿಸಿ, ಸುಪರ್ದಿಯನ್ನು ಕೊಡುವ ತನಕ, ಅಂಥಹ ವ್ಯಕ್ತಿಯು ಆ ನಿಗದಿತ ದಿನಾಂಕದಿಂದ ಅಂಥಹ ಆಸ್ತಿಯ ಸುಪರ್ದಿ, ಅಭಿರಕ್ಷೆ, ಅಥವಾ ನಿಯಂತ್ರಣವನ್ನು ರಾಜ್ಯ ಸರ್ಕಾರದ ಪರವಾಗಿ ಹೊಂದಿರುತ್ತಾರೆ.

2) ನಿಗದಿತ ದಿನಾಂಕದಂದು ಯಾವುದೇ ವ್ಯಕ್ತಿಯು ತನ್ನ ಸುಪರ್ದಿನಲ್ಲಿ, ಅಭಿರಕ್ಷೆಯಲ್ಲಿ, ತನ್ನ ನಿಯಂತ್ರಣದಲ್ಲಿ ಯಾವುದೇ ಪುಸ್ತಕಗಳು, ಲೆಕ್ಕ ಪತ್ರಗಳು, ದಸ್ತಾವೇಜುಗಳು, ಇತರ ಕಾಗದ ಪತ್ರಗಳು, ಅವುಗಳನ್ನು ಕಲಂ 18 ರಡಿಯಲ್ಲಿ ಸರ್ಕಾರಕ್ಕೆ ವರ್ಗಾಯಿಸಿ ಹಾಗೂ ಸರ್ಕಾರದಲ್ಲಿ ವಿಹಿತಗೊಳಿಸಿದೆಯೋ ಅದನ್ನು , ಅವುಗಳನ್ನು ಆ ಪುಸ್ತಗಳು, ಲೆಕ್ಕ ಪತ್ರಗಳು, ದಸ್ತಾವೇಜುಗಳನ್ನು ಸರ್ಕಾರದ ಸುಪರ್ದಿಗೆ ಒಪ್ಪಿಸಲು ಬದ್ದನಾಗಿರುತ್ತಾರೆ. ಅವುಗಳನ್ನು ಸರ್ಕಾರಕ್ಕೆ ಅಥವಾ ಸರ್ಕಾರವು ನಿರ್ದೇಶನ ಮಾಡುವ ವ್ಯಕ್ತಿಗೆ ಒಪ್ಪಿಸಿ, ಸುಪರ್ದಿಯನ್ನು ನೀಡತಕ್ಕದ್ದು.

3) ಈ ಕಲಂನಲ್ಲಿನ ಇತರ ಉಪಬಂಧಗಳಿಗೆ ಧಕ್ಕೆಬಾರದಂತೆ, ಈ ಅಧ್ಯಾಯದಡಿಯಲ್ಲಿ ಸರ್ಕಾರಕ್ಕೆ ವರ್ಗಾಯಿಸಲ್ಪಟ್ಟ, ಸರ್ಕಾರದಲ್ಲಿ ವಿಹಿತವಾಗಿರುವ ಎಲ್ಲಾ ಆಸ್ತಿಗಳ ಸುಪರ್ದಿಯನ್ನು ಪಡೆದುಕೊಳ್ಳಲು ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು ಸರ್ಕಾರಕ್ಕೆ ನಿಯಮಾನುಸಾರ, ಔಚಿತ್ಯಪೂರ್ಣವಾಗಿದೆ.

ಅಧ್ಯಾಯ - ΠI

ಜುಲ್ಮಾನೆಗಳು/ದಂಡ.

23. ಕರ್ತವ್ಯದ ಉಲ್ಲಂಘನೆಗೆ, ವಗ್ಯೆರೆ ಗಳಿಗೆ ವಿಧಿಸುವ ದಂಡ/ಜುಲ್ಮಾನೆ.

ದಳದ ಯಾವುದೇ ಸದಸ್ಯರು, ಯಾರೇ ಆಗಲೀ,

(ಚಿ)ಕರ್ತವ್ಯದ ಉಲ್ಲಂಘನೆಯ ತಪ್ಪಿತಸ್ಥ ನೆಂದು ಕಂಡು ಬಂದಲ್ಲಿ, ಈ ಅಧಿನಿಯಮದ ಯಾವುದೇ ಉಪಬಂಧದ, ನಿಯಮದ, ಅಥವಾ ಇದರಡಿಯಲ್ಲಿನ ಯಾವುದೇ ಆಜ್ಞೆಯ ಉದ್ದೇಶಪೂರ್ವಕವಾದ ಭಂಗ, ಉಲ್ಲಂಘನೆ ಅಥವಾ

(b)ಅಂಜುಬುರುಕುತನ ಅಥವಾ ಹೇಡಿತನದ ತಪ್ಪಿತಸ್ಥನೆಂದು ಕಂಡು ಬಂದಲ್ಲಿ,

(ಬಿ)ತನ್ನ ಹುದ್ದೆ, ಅಧಿಕಾರದಿಂದ, ಕರ್ತವ್ಯಗಳಿಂದ ಅನುಮತಿಯಿಲ್ಲದೆ ಹಿಂತೆಗೆದುಕೊಂಡಲ್ಲಿ, ದೂರವಾದಲ್ಲಿ ಅಥವಾ ಕನಿಷ್ಠ ಎರಡು ತಿಂಗಳ ಪೂರ್ವ ಮುನ್ಸೂಚನೆ ನೀಡದೆ ಇದ್ದಲ್ಲಿ,

(ಜ) ರಜೆಯ ಮೇಲೆ ಗೈರು ಹಾಜರಾಗಿದ್ದು, ರಜೆಯ ಅವಧಿ ನಂತರ ಸರಿಯಾದ ಕಾರಣವಿಲ್ಲದೇ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ / ವರದಿ ಮಾಡಿಕೊಳ್ಳದಿದ್ದಲ್ಲಿ,

(ಜೆ) ಕಲಂ 28 ರ ಉಪಬಂಧಗಳ ಉಲ್ಲಂಘನೆ ಬೇರ್ಯಾವುದೇ ನೌಕರಿ ಅಥವಾ ಹುದ್ದೆಯನ್ನು ಒಪ್ಪಿ/ಸ್ವೀಕರಿಸಿದಲ್ಲಿ –

ಮೇಲ್ಕಂಡ ಅಪರಾಧಗಳಿಗಾಗಿ ಮೂರು ತಿಂಗಳಷ್ಟು ಅವಧಿಯ ಕಾರಾಗೃಹ ವಾಸ ಅಥವಾ ದಂಡ/ಜುಲ್ಮಾನೆ, ಅದು-ಮೊತ್ತವು ಅಂಥಹ ಸದಸ್ಯರ ಮೂರು ತಿಂಗಳ ಮೇತನಕ್ಕೆ ಮೀರದಂತೆ ಅಥವಾ ಇವೆರಡೂ ಸಹ, ಶಿಕ್ಷೆಯಾಗಿ ನೀಡಬಹುದಾಗಿದೆ. 1(23 ಂ) ರಾಜದ್ರೋಹ/ಅಪ್ರೀತಿಯನ್ನುಂಟು ಮಾಡಿದುದಕೆ ದಂಡ/ಜುಲ್ಮಾನೆ.

ಯಾವುದೇ ವ್ಯಕ್ತಿಯು ಉದ್ದೇಶ ಪೂರ್ವಕವಾಗಿ, ರಾಜದ್ರೋಹ/ಸರ್ಕಾರದ ಬಗೆಗೆ ಅಪ್ರೀತಿಯನ್ನುಂಟು ಮಾಡಲು, ಪ್ರಯತ್ನಿಸಿದ್ದಲ್ಲಿ, ಅಥವಾ ಕೃತ್ಯವೊಂದು ಆ ರೀತಿ ಪರಿಣಾಮವಿದೆಯೆಂದು ತಿಳಿದಿದ್ದರೂ ಸಹ, ನಡೆಸಿದಲ್ಲಿ, ಆಗ್ನಿಶಾಮಕದಳದ ಸದಸ್ಯರಲ್ಲಿ ಕಾನೂನು ಪೂರ್ವಕವಾಗಿ ಸ್ಥಾಪಿತವಾದ ಸರ್ಕಾರದ ಬಗೆಗೆ ಅಪ್ರೀತಿಯನ್ನುಂಟು ಮಾಡಿದಲ್ಲಿ, ದಳದ ಯಾವುದೇ ವ್ಯಕ್ತಿಯು ತನ್ನ ಸೇವೆಯನ್ನು ಹಿಂತೆಗೆದುಕೊಳ್ಳುವಂತೆ ಪ್ರೇರಣೆ, ದುಷ್ಪ್ರೇರಣೆ ಮಾಡಿ, ಅಥವಾ ದುಷ್ಪ್ರೇರಣೆಯಾಗುತ್ತೆಂದು ತಿಳಿದು ಅಂಥಹ ಕೃತ್ಯವನ್ನೆಸಗಿದ್ದಲ್ಲಿ ಅಥವಾ ಶಿಸ್ತು ಭಂಗ, ಉಲ್ಲಂಘನೆ ಮಾಡಿದಲ್ಲಿ, ಮೇಲ್ಕಂಡ ಅಪರಾಧಗಳಿಗಾಗಿ ಆರು ತಿಂಗಳಷ್ಟು ಅವಧಿಯ ಕಾರಾಗೃಹ ವಾಸ ಅಥವಾ ದಂಡ/ಜುಲ್ಮಾನೆ, ಅದು-ಮೊತ್ತವು ರೂ.ಎರಡು ನೂರು ಮೀರದಂತೆ, ಅಥವಾ ಇವೆರಡನ್ನೂ ಸಹ ಶಿಕ್ಷೆಯಾಗಿ ನೀಡಬಹುದಾಗಿದೆ.

ವಿವರಣೆ : ಸರ್ಕಾರದ ಕ್ರಮಗಳ ಅನುಮೋದನೆ ಇಲ್ಲದಿರುವುದು, ಅದು ಅವುಗಳ ಬದಲಾವಣೆ/ತಿದ್ದುಪಡಿಯನ್ನು ಕಾನೂನುಗಳ ಪ್ರಕಾರವೇ ಮಾಡಲು/ಪಡೆದುಕೊಳ್ಳಲು, ಅಥವಾ ಸರ್ಕಾರ ಆಡಳಿತಾತ್ಮಕ ಅಥವಾ ಇತರ ಕ್ರಮಗಳನ್ನು ಅನುಮೋದಿಸದಿರುವುದು. ಇವುಗಳು ಈ ಕಲಂನಡಿಯಲ್ಲಿ ಅಪರಾಧವೆಂದು ಪರಿಗಣಿಸಲಾಗುವುದಿಲ್ಲ. ಎಲ್ಲಿಯವರೆಗೂ ಅವು ಸರ್ಕಾರದ ಅಪ್ರಿಯತೆಯನ್ನು ಮಾಡಲು, ಅಥವಾ ಮಾಡಲು ಕಾರಣವಾಗದಿರುವ ತನಕ, ಅಪರಾಧವಾಗುವುದಿಲ್ಲ.) 1 1940 ರ ಅಧಿನಿಯಮ 40 ರಡಿಯಲ್ಲಿ ಸೇರಿಸಲಾಯಿತು.

24. ಮಾಹಿತಿ ನೀಡುವಲ್ಲಿ ವೈಫಲ್ಯ.

ಕಲಂ 37 ರಡಿಯಲ್ಲಿ ಯಾವುದೇ ವ್ಯಕ್ತಿಯು ಸರಿಯಾದ ಕಾರಣವಿಲ್ಲದೇ ಬೆಂಕಿ ದುರಂತದ ಬಗೆಗೆ ತನ್ನಲ್ಲಿರುವ ಮಾಹಿತಿಯನ್ನು ನೀಡಲು ವಿಫಲನಾದಲ್ಲಿ ಅಂಥಹವರಿಗೆ ಒಂದು ತಿಂಗಳಷ್ಟು ಅವಧಿಗೆ ವಿಸ್ತರಿಸಬಹುದಾದ ಕಾರಾಗೃಹ ಅಥವಾ ದಂಡ ಅದು ರೂ.500/- ತನಕ ಅಥವಾ ಎರಡನ್ನೂ ವಿಧಿಸಬಹುದಾಗಿದೆ.

25. ಮುಂಜಾಗರೂಕತೆಯ ಕ್ರಮ ತೆಗೆದುಕೊಳ್ಳಲು ವಿಫಲತೆ .

ಯಾವುದೇ ವ್ಯಕ್ತಿಯು ಸರಿಯಾದ ಕಾರಣವಿಲ್ಲದೇ ಕಲಂ 13 ರಡಿಯ ಉಪಕಲಂ (1) ನಡಿಯಲ್ಲಿ ಹೊರಡಿಸಿದ ಅಧಿಸೂಚನೆಯಡಿಯಲ್ಲಿ, ಅಥವಾ ಅದೇ ಕಲಂ ನ ಉಪಕಲಂ (2) ರಡಿಯಲ್ಲಿನ ನಿರ್ದೇಶನವನ್ನು ಪಾಲಿಸಲು ವಿಫಲನಾದಲ್ಲಿ, ಅಂಥಹವರನ್ನು ಐದು ನೂರು ರೂಪಾಯಿಗಳ ವರೆಗಿನ ದಂಡವನ್ನು ವಿಧಿಸಲು ಅರ್ಹರಾಗುತ್ತಾರೆ.

26. ಅಗ್ನಿಶಾಮಕದಳದ ಕಾರ್ಯವನ್ನು/ಆಚರಣೆಯನ್ನು ಉದ್ದೇಶಪೂರ್ವಕವಾಗಿ ಅಡ್ಡಿ ಪಡಿಸುವುದು : ಯಾವುದೇ ವ್ಯಕ್ತಿಯು ಉದ್ದೇಶ ಪೂರ್ವಕವಾಗಿ ಅಗ್ನಿ ಶಮನ, ಬೆಂಕಿ ಆರಿಸುವ ಆಚರಣೆಯ ಕಾರ್ಯದಲ್ಲಿ ತೊಡಗಿರುವ ದಳದ ಸದಸ್ಯರನ್ನು ಅಡ್ಡಿಪಡಿಸಿದಲ್ಲಿ ಅಥವಾ ಹಸ್ತಕ್ಷೇಪ ಮಾಡಿದಲ್ಲಿ, ಅವರಿಗೆ ಮೂರು ತಿಂಗಳ ವರೆಗಿನ ಕಾರಾಗೃಹ ವಾಸ ಅಥವಾ ಐದು ನೂರು ರೂಪಾಯಿಗಳ ತನಕ ದಂಡ ಅಥವಾ ಎರಡನ್ನೂ ಸಹ ವಿಧಿಸಬಹುದಾಗಿದೆ.

ಅಧ್ಯಾಯ – VII

ಸಾಮಾನ್ಯ ಮತ್ತು ಸಂಕೀರ್ಣ.

28. ಇತರ ನೌಕರಿಯ ನಿಷೇಧ.

ಈ ಅಧಿನಿಯಮಡಿಯಲ್ಲಿನ ಕರ್ತವ್ಯಗಳನ್ನು ನಿರ್ವಹಿಸುವುದಲ್ಲದೇ, ದಳದ ಯಾವುದೇ ಸದಸ್ಯರು ಬೇರೆ ಯಾವುದೇ ನೌಕರಿ ಅಥವಾ ಹುದ್ದೆಯನ್ನು ಹೊಂದಿ, ಕಾರ್ಯನಿರ್ವಹಿಸುವಂತಿಲ್ಲ.

29. ಬೇರೆ ಪ್ರದೇಶಕ್ಕೆ ವರ್ಗಾವಣೆ.

ಈ ಅಧಿನಿಯಮವು ಅನ್ವಯವಾಗದ, ವ್ಯಾಪ್ತಿ ಪ್ರದೇಶದಿಂದ ಹೊರಗಿನ ಸ್ಥಳದಲ್ಲಿ ಬೆಂಕಿ ಅಥವಾ ತುರ್ತು ಪರಿಸ್ಥಿತಿ ಉಂಟಾದಾಗ, ನಿರ್ದೇಶಕರು ಅಥವಾ ರಾಜ್ಯ ಸರ್ಕಾರಿದಿಂದ ಅಧಿಕೃತ ಗೊಳಿಸಿದ ಬೇರೆ ಯಾವುದೇ ಅಧಿಕಾರಿಯು, ದಳದ ಸದಸ್ಯರು ಅವಶ್ಯವಾದ ಅಗ್ನಿಶಾಮಕ ಕಾರ್ಯಕ್ಕೆ ಬೇಕಾಗುವ ಉಪಕರಣಗಳೊಡನೆ, ಸಲಕರಣೆಗಳೊಡನೆ, ಅಂಥಹ ಸನಿಹದ ನೆರೆಹೊರೆಯ ಪ್ರದೇಶಕ್ಕೆ ದಳವನ್ನು ಕಳುಹಿಸಕೊಡಬಹುದಾಗಿದೆ ಮತ್ತು ಕಲಂ 1 ರ ಉಪಕಲಂ (3) ರ ಉಪಬಂಧಗಳು ಏನೇ ಹೇಳಲಿ, ಈ ಅಧಿನಿಯಮದ ಎಲ್ಲಾ ಉಪಬಂಧಗಳೂ ಸಹ ಅದರಡಿಯಲ್ಲಿ ರಚಿತವಾದ ನಿಯಮಗಳೂ ಸಹ, ಅಂಥಹ ಪ್ರದೇಶಕ್ಕೆ, ಇಂತಹ ಅಗ್ನಿ ದುರಂತ ಅಥವಾ ತುರ್ತು ಪರಿಸ್ಥಿತಿಯಲ್ಲಿ ಅಥವಾ ನಿರ್ದೇಶಕರು ನಿರ್ದಿಷ್ಠ ಪಡಿಸುವ ಅವಧಿಯಲ್ಲಿ ಅನ್ವಯವಾಗುತ್ತದೆ.

30. ಇತರ ಕರ್ತವ್ಯಗಳ ಮೇಲೆ ನೇಮಕಾತಿ/ನಿಯುಕ್ತಿ. ಈ ದಳವು ಅದಕ್ಕೆ ದೊರತಿರುವ ತರಭೇತಿ, ಹೊಂದಿರುವ ಸಲಕರಣೆ, ಉಪಕರಣಗಳಿಂದ ಅದಕ್ಕೆ ಸರಿಹೊಂದುವ ಬೆಂಕಿಯಿಂದ ರಕ್ಷಣೆ, ವಸ್ತುಗಳನ್ನು ಹಾಳಾಗದಂತೆ ಉಳಿಸಿಕೊಳ್ಳುವುದು, ಬಿಡಿಸಿಕೊಳ್ಳುವಿಕೆ, ಪಾರು ಮಾಡುವಿಕೆ, ಮತ್ತಿತರ ಕೆಲಸಗಳಲ್ಲಿ ತರಬೇತಿ ಹೊಂದಿದ್ದು ಆದುದರಿಂದ ಈ ದಳವನ್ನು ಯಾವುದೇ ಬೆಂಕಿ ಅಥವಾ ತುರ್ತು ಪರಿಸ್ಥಿತಿಗಳಲ್ಲಿ ಬಳಸಿಕೊಳ್ಳುವುದು ರಾಜ್ಯ ಸರ್ಕಾರಕ್ಕೆ ಅಥವಾ ಯಾವುದೇ ಅಧಿಕಾರಿಗಳಿಗೆ ಕಾನೂನಿನ ಪ್ರಕಾರ ಉಚಿತವಾಗಿದೆ.

31.ಪರಿಹಾರ ಧನ ನೀಡುವಲ್ಲಿ ಆಸ್ತಿಯ ಮಾಲಿಕರ ಹೊಣೆಗಾರಿಕೆ : (1) ಯಾವುದೇ ವ್ಯಕ್ತಿಯ ಆಸ್ತಿಯು ತನ್ನದೇ ಅಥವಾ ತನ್ನ ಏಜೆಂಟ್

ನ ಉದ್ದೇಶ ಪೂರ್ವಕವಾದ ಅಥವಾ ನಿರ್ಲಕ್ಷದಿಂದುಂಟಾದ ಕಾರಣದಿಂದ ಬೆಂಕಿ ಹತ್ತಿಕೊಂಡಲ್ಲಿ , ಅದರಿಂದ ಕಟ್ಟಡ ಜಖಂಆದಲ್ಲಿ, ಆ ರೀತಿ ಈ ಅಧಿನಿಯಮದ ಕಲಂ 10 ರಡಿಯಲ್ಲಿ – ಅದರಲ್ಲಿ ನಮೂದಿಸಲ್ಪಟ್ಟ ಯಾವುದೇ ಅಧಿಕಾರಿ, ಅಥವಾ ಆ ಅಧಿಕಾರಿಯಿಂದ ಅಧಿಕಾರ ಪಡೆದು ಕಾರ್ಯ

ನಿರ್ವಹಿಸುತ್ತಿರುವ ಯಾವುದೇ ವ್ಯಕ್ತಿ ಇವರು ಕ್ರಮ ತೆಗೆದುಕೊಂಡುದರಿಂದ ನಷ್ಟ ಹೊಂದಿದ ಬೇರೊಬ್ಬ ವ್ಯಕ್ತಿಗೆ ಪರಿಹಾರಧನವನ್ನು ನೀಡಲು ಬದ್ದರಾಗಿರುತ್ತಾರೆ.

2)ಉಪಕಲಂ 1 ರಡಿಯಲ್ಲಿನ ಎಲ್ಲಾ ತಗಾದೆಗಳೂ ಸಹ ಜಿಲ್ಲಾಧಿಕಾರಿಗಳಿಗೆ, ಜಖಂ ಆದ ತಾರೀಖಿನಿಂದ 30 ದಿನಗಳೊಗಳಗೆ ಸಲ್ಲಿಸಬಹುದಾಗಿದೆ.

3)ಜಿಲ್ಲಾಧಿಕಾರಿಗಳು, ಪಕ್ಷಕಾರರಿಗೆ ತಮ್ಮ ವಾದ ಮಂಡಿಸಲು ಅವಕಾಶವನ್ನು ನೀಡಿ, ಪರಿಹಾರಧನದ ಮೊತ್ತ ನಿರ್ಧರಣೆ ಮಾಡಿ, ಅದರ ಮೊತ್ತವನ್ನು ನಮೂದಿಸಿ ಮತ್ತು ಅದಕ್ಕೆ ಹೊಣೆಯಾದ ವ್ಯಕ್ತಿಯನ್ನು ಸಹ ತಿಳಿಸಿ ಆಜ್ಞೆಯನ್ನು ಹೊರಡಿಸುತ್ತಾರೆ. ಆರೀತಿ ಹೊರಡಿಸಿದ ಆಜ್ಞೆಯು ಸಿವಿಲ್ ನ್ಯಾಯಾಲಯದ ಡಿಕ್ರಿಯಷ್ಟೇ ಮಹತ್ವವನ್ನು ಹೊಂದಿರುತ್ತದೆ.

32.ಮಾಹಿತಿ ಪಡೆಯುವ ಅಧಿಕಾರ: ಅಗ್ನಿಶಾಮಕಠಾಣೆಯ ಠಾಣಾಧಿಕಾರಿಗಿಂತ ಕಡಿಮೆಯಿಲ್ಲದ ಅಗ್ನಿಶಾಮಕದಳದ ಯಾವುದೇ ಅಧಿಕಾರಿಯು, ಈ ಅಧಿನಿಯಮದಡಿಯಲ್ಲಿ ಕಾರ್ಯವನ್ನು ನಿರ್ವಹಿಸಲು, ಯಾವುದೇ ಕಟ್ಟಡ ಅಥವಾ ಆಸ್ತಿಯ ಬಗೆಗೆ ಅದರ ಸ್ವರೂಪ, ನೀರಿನ ಸರಬರಾಜಿಗೆ ಅದರ ಲಭ್ಯತೆ, ಅದನ್ನು ನೀರನ್ನು ಪಡೆಯುವ ಸಾಧನ, ದಾರಿ, ಮತ್ತು ಸಾಮಾಗ್ರಿಗಳ ವಿವರಗಳು ಮತ್ತು ಆ ಮಾಲಿಕ ಅಥವಾ ಅನುಭವದಾರರು ತನ್ನಲ್ಲಿರುವ ಲಭ್ಯವಾದ ಎಲ್ಲಾ ಮಾಹಿತಿಯನ್ನು ಒದಗಿಸತಕ್ಕದ್ದು.

33.ಪ್ರವೇಶದ ಅಧಿಕಾರ: 1) ನಿರ್ದೇಶಕರು ಅಥವಾ ಅವರಿಂದ ತನ್ನ ಪರವಾಗಿ ಅಧಿಕೃತವಾಗಿ ಕಾರ್ಯನಿರ್ವಹಿಸುವ ದಳದ ಮತ್ಯಾವುದೇ ಸದಸ್ಯ, ಕಲಂ 13 ರಡಿಯಲ್ಲಿನ ಯಾವುದೇ ಅಧಿಸೂಚನೆಯಲ್ಲಿ ನಿರ್ದಿಷ್ಟ ಪಡಿಸಿದ ಯಾವುದೇ ಸ್ಥಳಕ್ಕೆ ಅಗ್ನಿ ದುರಂತದ ಬಗೆಗಿನ ಎಲ್ಲಾ ಮುಂಜಾಗರೂಕತ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆಯೇ ಎಂದು ಪರೀಕ್ಷಿಸಿ ನಿರ್ಧರಿಸಲು ಮುಕ್ತ ಪ್ರವೇಶಾಧಿಕಾರ ಹೊಂದಿರುವರು.

2)ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ತಿಳಿಸಿಲ್ಲದರ ಹೊರತಾಗಿ ಉಪ ಕಲಂ 1 ರಡಿಯಲ್ಲಿ ನಮೂದಿಸಲ್ಪಟ್ಟಂತೆ, ಯಾವುದೇ ವ್ಯಕ್ತಿಯ ವಿರುದ್ದ ಜಖಂ ಅದುದರ ವಿರುದ್ದ ಪರಿಹಾರಕ್ಕಾಗಿ ಯಾವುದೇ ತಕರಾರು ಉದ್ಭವಿಸುವುದಿಲ್ಲ/ನಿಲ್ಲುವುದಿಲ್ಲ.

34.ನೀರಿನ ಉಪಯೋಗ: ಅಗ್ನಿಶಾಮಕದಳವು ಬೆಂಕಿಯನ್ನಾರಿಸಲು ಉಪಯೋಗಿಸಿದ ನೀರಿಗೆ ಯಾವುದೇ ರೀತಿಯ ಶುಲ್ಕವನ್ನು ವಸೂಲ್ಮಾಡುವಂತಿಲ್ಲ.

35. ನೀರು ಸರಬರಾಉ ವ್ಯತ್ಯಯವಾದಲ್ಲಿ ಯಾವುದೇ ಪರಿಹಾರವಿಲ್ಲ, ಒಂದು ಪ್ರದೇಶದಲ್ಲಿ ನೀರು ಸರಬರಾಜು ಮಾಡುವ ಅಧಿಕಾರವುಳ್ಳ ಯಾವುದೇ ಪ್ರಾಧಿಕಾರವು ತನಗಾದ ನಷ್ಟಕ್ಕಾಗಿ ಯಾವುದೇ ಪರಿಹಾರವನ್ನು ನೀರು ಸರಬರಾಜಿನಲ್ಲಾದ ವ್ಯತ್ಯಯ-ಅದು ಕಲಂ 10ರ ಉಪಖಂಡ (ಡಿ) ಅಡಿಯಲ್ಲಿನ ನಿರ್ದಿಷ್ಟ ಪಡಿಸಿದಂತೆ, ಅವಶ್ಯಕತೆಗನುಸಾರವಾಗಿ, ತಗಾದೆಯನ್ನು ಮಾಡುವಂತಿಲ್ಲ.

36.ಪೊಲೀಸ್ ಅಧಿಕಾರಿಗಳು ಸಹಾಯ ಮಾಡುವಿಕೆ: ಈ ಅಧಿನಿಯಮದಲ್ಲಿ ಕರ್ತವ್ಯನಿರತರಾದ ಅಗ್ನಿಶಾಮಕದಳದ ಸದಸ್ಯರ ಕರ್ತವ್ಯದಲ್ಲಿ ಸಹಕಾರ/ಸಹಾಯ ಮಾಡುವುದು ಎಲ್ಲಾ ಮಟ್ಟದ/ಹುದ್ದೆಯ ಪೊಲೀಸ್ ಅಧಿಕಾರಗಳ ಕರ್ತವ್ಯವಾಗಿದೆ.

37.ಅಗ್ನಿ/ಬೆಂಕಿ ಹತ್ತಿಕೊಂಡ ಬಗೆಗೆ ಮಾಹಿತಿ ನೀಡುವಿಕೆ: ಬೆಂಕಿ ಹತ್ತಿಕೊಂಡುದರ ಬಗೆಗೆ ಮಾಹಿತಿ ಹೊಂದಿದ ಯಾವುದೇ ವ್ಯಕ್ತಿಯು ತಡ ಮಾಡದಲೇ, ಹತ್ತಿರದ ಅಗ್ನಿಶಾಮಕ ಠಾಣೆಗೆ ತಿಳಿಸುವುದು ಅವರ ಕರ್ತವ್ಯ.

38.ನಷ್ಟ್ರ ಭರ್ತಿ ಮಾಡುವಿಕೆ: ಈ ಅಧಿನಿಯಮಕ್ಕನುಸಾರವಾಗಿ, ಅಥವಾ ಅದರಡಿಯಲ್ಲಿ ರಚಿಸಿದ ಯಾವುದೇ ನಿಯಮದಡಿಯಲ್ಲಿ ಯಾವುದೇ ವ್ಯಕ್ತಿ ಸದುದ್ದೇಶದಿಂದ ಮಾಡಿದ, ಮಾಡಲು ಉದ್ಯುಕ್ತನಾದ ಕಾರ್ಯ/ಕರ್ತವ್ಯದ ಬಗೆಗೆ /ಅದರ ವಿರುದ್ಧ ಯಾವುದೇ ಮೊಕದ್ದಮೆ/ಸರ್ಕಾರಿ ವ್ಯಾಜ್ಯ/ಪ್ರಾಸಿಕ್ಯೂಷನ್, ಅಥವಾ ಇತರ ಕಾನೂನು ವ್ಯವಹರಣೆಗಳು ನಿಲ್ಲುವುದಿಲ್ಲ.

39.ನಿಯಮಗಳನ್ನು ರಚಿಸುವ ಅಧಿಕಾರ:

1) ರಾಜ್ಯ ಸರ್ಕಾರವು ಅಧಿಕೃತ ಗೆಜೆಟ್

ನಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಧ್ಯೇಯೋದ್ದೇಶಗಳನ್ನು ಸಾಧಿಸಲು, ಕೆಳಕಂಡಂತೆ.

2) ವಿಶೇಷವಾಗಿ ಮತ್ತು ಮೇಲ್ಕಂಡ ಅಧಿಕಾರಿಗಳಿಗೆ ಚ್ಯುತಿಬಾರದಂತೆ, ( ಪೂರ್ವಗ್ರಹವಿಲ್ಲದೇ) ಅಂಥಹ ನಿಯಮಗಳು ಕೆಳಕಂಡದುದನ್ನು ಒದಗಿಸುವುದು.

ಎ) ಅಧಿಕಾರಿಗಳ ಸಂಖ್ಯೆ/ಶ್ರೇಣಿಗಳು ಮತ್ತು ದಳದ ಸದಸ್ಯರುಗಳು

ಬಿ) ದಳದ ಸದಸ್ಯರ ನೇಮಕಾತಿಯ ರೀತಿ,

ಸಿ) ದಳದ ಸದಸ್ಯರಿಗೆ ನೀಡಲ್ಪಡುವ ಪ್ರಮಾಣಪತ್ರದ ಮಾದರಿ/ನಮೂನೆ.

ಡಿ) ದಳದ ಸದಸ್ಯರ ಸೇವಾ ಷರತ್ತುಗಳು, ಅದರಲ್ಲಿ ಅವರ ಹುದ್ದೆ/ಪದವಿ-ರ್ಯಾಂಕ್, ವೇತನ ಮತ್ತು ಭತ್ಯೆಗಳು, ಕರ್ತವ್ಯದ ಅವಧಿ/ಘಂಟೆಗಳು, ರಜಾ, ಶಿಸ್ತು ಪರಿಪಾಲನೆ ಮತ್ತು ಸೇವೆಯಿಂದ ಬರ್ತರ್ಫ್/ತೆಗೆಯುವುದು.

ಇ)ಅಕ್ಕ ಪಕ್ಕದ/ವ್ಯಾಪ್ತಿಯ ಹೊರಗಿನ ಸನಿಹದ ಪ್ರದೇಶಗಳಲ್ಲಿ ದಳದ ಸದಸ್ಯರನ್ನು ಅಗ್ನಿಶಾಮಕದಳದ ಕರ್ತವ್ಯ ನಿರ್ವಹಿಸಲು ಕಳುಹಿಸಲ್ಪಡುವ ಪರಿಸ್ಥಿತಿಗಳು ಮತ್ತು ಅಲ್ಲಿನ ಸ್ಥಿತಿಗತಿಗಳು:

ಎಫ್) ಕಷ್ಟದಿಂದ ಪಾರುಮಾಡಲು, ನೌಕೋದ್ಧರಣ ಅಥವಾ ಇತರ ಕರ್ತವ್ಯಗಳಲ್ಲಿ ದಳದ ಸದಸ್ಯರನ್ನು ನಿಯೋಜಿಸುವ ಪರಿಸ್ಥಿತಿಗಳು,

ಜಿ)ಈ ಅಧಿನಿಯಮದಡಿಯಲ್ಲಿ ವಿಧಿಸಲಾಗದ ಅಗ್ನಿತೆರಿಗೆಯನ್ನು ಯಾವ ರೀತಿ ಮತ್ತು ಎಷ್ಟು ಸಮಯದ/ಅವಧಿಯ ಅಂತರದಲ್ಲಿ ರಾಜ್ಯಸರ್ಕಾರಕ್ಕೆ ಜಮಾ/ಸಂದಾಯ ಮಾಡಲಾಗುವುದು.

ಎಚ್) ಈ ಅಧಿನಿಯಮದಡಿಯಲ್ಲಿ ಸೂಚನೆಯನ್ನು ಜಾರಿಮಾಡುವುದು/ಸರ್ವಿಸ್ ಆಫ್ ನೋಟಿಸ್

ಐ) ಯಾವುದಾದರೂ ಆಸ್ತಿ ಸ್ಥಳೀಯ ಪ್ರಾಧಿಕಾರ ನಿರ್ವಹಿಸುವ ಅಗ್ನಿಶಾಮಕದಳಕ್ಕೆ ಸೇರಿದುದೇ ಎಂಬುದನ್ನು ನಿರ್ಧರಿಸಲು ಅಥವಾ ಯಾವುದೇ ಹಕ್ಕುಗಳು, ಅಧಿಕಾರಿಗಳು, ಹೊಣೆಗಾರಿಕೆಗಳು ಅಥವಾ ನಿರ್ಬಂಧಗಳು ಪಡೆಯಲ್ಪಟ್ಟಿತೆ, ಅಥವಾ ಯಾವುದೇ ಕರಾರು ಅಥವಾ ಒಪ್ಪಂದ ಅಥವಾ ಇತರ ಸಾಧನವನ್ನು ಸ್ಥಳೀಯ ಪ್ರಾಧಿಕಾರವು, ಅಗ್ನಿಶಾಮಕದಳದ ಉದ್ದೇಶಕ್ಕಾಗಿ ಮಾಡಿತೇ ಅಥವಾ ದಸ್ತಾವೇಜು, ಈ ಉದ್ದೇಶಗಳಿಗೆ ಸಂಬಂಧಿಸಿರುವುದೇ,

ಜೆ)ಅಗ್ನಿಶಾಮಕ ಕಾರ್ಯ/ಉದ್ದೇಶಗಳಿಗೆ ಸೇವೆ ಸಲ್ಲಿಸಿದ ಅಗ್ನಿಶಾಮಕದಳದ ಸದಸ್ಯರಲ್ಲದವರಿಗೆ ಪ್ರಶಸ್ತಿ, ನಗದು ನೀಡುವಿಕೆ.

ಕೆ)ಅಪಘಾತ ಸಂದರ್ಭದಲ್ಲಿ ದಳದ ಸದಸ್ಯರಿಗೆ ಕೊಡಬಹುದಾದ ಪರಿಹಾರ ಅಥವಾ ಕರ್ತವ್ಯ ನಿರತರಾದಲ್ಲಿ ಸಾವನ್ನಪ್ಪಿದಲ್ಲಿ ಅವರ ಅವಲಂಬಿತರಿಗೆ ನೀಡಬಹುದಾದ ಪರಿಹಾರದ ಮೊತ್ತ.

ಎಲ್) ದಳದ ಸದಸ್ಯರ ನೇಮಕಾತಿ ಅಥವಾ ವ್ಯಾಪ್ತಿ ಪ್ರದೇಶದ ಹೊರಗೆ ಸಲಕರಣೆ/ಅಥವಾ ವಿಶೇಷ ಸೇವೆಗಳಿಗೆ ನೀಡಬಹುದಾದ ಶುಲ್ಕಗಳು : ಮತ್ತು

ಎಂ)ಇದೀಗ ಅಥವಾ ಮುಂದೆ ನಿಗದಿ ಪಡಿಸಬಹುದಾದ ಬೇರ್ಯಾವುದೇ ವಿಷಯ.

3)ಈ ಅಧಿನಿಯಮದಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನೂ ಸಹ, ಸಾಧ್ಯವಾದಷ್ಟು ಬೇಗ ರಾಜ್ಯ ವಿಧಾನಮಂಡಲದ ಎರಡೂ ಸದನಗಳ ಮುಂದೆ ಮಂಡಿಸಲಾಗುವುದು, ವಿಧಾನಮಂಡಲದ ಅಧಿವೇಶನವು ಒಟ್ಟಾರೆ 30 ರಿನಗಳ ಅವಧಿಗೆ, ಅದು ಒಂದೇ ಅಧಿವೇಶನದಲ್ಲಿ ಇರಬಹುದು ಅಥವಾ ಎರಡು ಒಂದರನಂತರ ಒಂದು ಅಧಿವೇಶನಗಳಿರಬಹುದಾಗಿದೆ, ಅಧಿವೇಶನ ಮುಗಿಯುವ ಮುನ್ನ ಮಸೂದೆಯನ್ನ ಮಂಡಿಸುವ ಅಥವಾ ತಕ್ಷಣದಲ್ಲಿ ಸೇರುವ ಮುಂದಿನ ಅಧಿವೇಶನವಾಗಬಹುದು, ಉಭಯ ಸದನಗಳೂ ಸಹ ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಬಯಸಿದಲ್ಲಿ, ಅಥವಾ ಉಭಯ ಸದನಗಳೂ ಸಹ ನಿಯಮವನ್ನು ಮಾಡಬಾರದೆಂದು ನಿರ್ಧರಿಸಿದಲ್ಲಿ, ತದನಂತರದ ನಿಯಮವು ಮಾರ್ಪಾಟಾದ ರೀತಿಯಲ್ಲಿ ನಿಯಮವು ಉಳಿದುಕೊಳ್ಳುತ್ತದೆ ಅಥವಾ ಆಯಾ ಪ್ರಕರಣಾನುಸಾರವಾಗಿ ಯಾವುದೇ ಪರಿಣಾಮವಿರುವುದಿಲ್ಲ : ಆದಾಗ್ಯೂ ಆ ರೀತಿಯ ಯಾವುದೇ ಮಾರ್ಪಾಟು, ಅಥವಾ ನಿರಸನ ಇವು ಈ ಮೊದಲು ನಿಯಮಾನುಸಾರ ಮಾಡಿದ ಸಿಂಧುತ್ವ/ಮಾನ್ಯತೆಯಉಳಿಯುವಿಕೆ/ಯಾವುದೇ ಹಾನಿ/ಪೂರ್ವಾಗ್ರಹ ವಿರುವುದಿಲ್ಲ.

40. ರದ್ದಿಯಾತಿ ಮತ್ತು ಉಳಿಸುವಿಕೆ.

1) ಒಂದು ಪ್ರದೇಶದಲ್ಲಿ ಈ ಅಧಿನಿಯಮವು ಜಾರಿಗೆ ಬರುವ ದಿನದ ಮೊದಲು ಬೇರೆ ಯಾವುದೇ ಕಾನೂನು, ನಿಯಮ ಅಥವಾ ಉಪ ವಿಧಿ – ಕಾನೂನಿನ ಮಹತ್ವವುಳ್ಳದ್ದು ಚಾಲ್ತಿಯಲ್ಲಿದ್ದರೆ, ಅದು ಈ ಅಧಿನಿಯಮದ ಯಾವುದೇ ಖಂಡ/ವಿಧಿಗೆ ಸಂವಾದಿಯಾಗಿದ್ದಲ್ಲಿ ಆ ರೀತಿಯ ಕಾನೂನು, ನಿಯಮ, ಈ ವಿಷಯಕ್ಕೆ ಸಂಬಂಧಿಸಿದಂತೆ ಇದ್ದಲ್ಲಿ ಆ ದಿನದಲ್ಲಿ ಅದು ರದ್ದಾಗುತ್ತದೆ.